plough,— whose share still bears the remains of the Saub
City, which functioned like a firm hook to the rampart
Mahāsura's capital, which dictated to the waters of Yamu
(the course of their flow), and which was honoured by
presents of the lives of the enemies' forces,—(I) will enga
it in drawing furrows on Bhīma's broad chest besmea
with a fresh coagulation of sweat and blood. [2

73 (*Behind the curtain*) May the venerable Halāyudha
appeased !

74 BALADEVA— Ey, although in such a plight as th

---

72 ಸೌಭನಗರದಲ್ಲಿ ಉಳಿದುದನ್ನು ಹೊತ್ತ ತುದಿಯುಳ್ಳ, ಮಹಾಸುರ(ನ
ಸಾಲ್ವ)ನ ನಗರದ ಪ್ರಾಕಾರಕ್ಕೆ ಅಚಲವಾದ ಅಂಕುಶವಾಗಿದ್ದ, ಯಮುನೆ
ನೀರಿಗೆ ಆಜ್ಞಾಕರವಾದ, ಶತ್ರು ಸೈನ್ಯದ ಪ್ರಾಣಗಳ ಉಪಹಾರದಿಂದ ಅಚಿ
ವಾದ ನೇಗಿಲನ್ನು ರಕ್ತ ಬೆವರುಗಳೆಂಬ ಹಸಿ ಕೆಸರು ಮೆತ್ತಿದ ಭೀಮ
ವಿಶಾಲವಾದ ಎದೆಯಮೇಲೆ ಕೈಯಿಂದೆತ್ತಿಟ್ಟು ಉತ್ತುಬಿಡುತ್ತೇನೆ. [2

73 (ತೆರೆಯ ಹಿಂದೆ) ಪ್ರಸನ್ನನಾಗಲಿ! ಭಗವಾನ್ ಹಲಾಯುಧ
ಪ್ರಸನ್ನನಾಗಲಿ!

74 ಬಲದೇವ-ಅಯ್ಯೋ! ಈ ಸ್ಥಿತಿಯಲ್ಲಿದ್ದರೂ ಬಡಪಾಯಿ ದುರ್ಯೋಧನ

75 श्रीमान् संयुगचन्दनेन रुधिरेणार्द्रानुलिप्तच्छविः
भूसंसर्पणरेणुपाटलभुजो बालव्रतं ग्राहितः ।
निर्वृत्तेऽमृतमन्थने क्षितिधरान्मुक्तः सुरैः सासुरैः
आकर्षन्निव भोगमर्णवजले श्रान्तोज्झितो वासुकिः ॥२९॥

76 (ततः प्रविशति भग्नोरुयुगलो दुर्योधनः)

77 दुर्योधनः—एष भोः !

---

poor Duryodhana is following me. He

75 is resplendent with his complexion besmeared freshly with blood which is the sandal paste in battles; with arms brown by dust due to creeping on the ground, he is made to put on the role of an infant; and he looks like the fatigued but free Vāsuki dragging his body in the ocean water, being released from the (Mandara) mountain by gods and demons when the churning for nectar was over.

76 *(Then enters Duryodhana with both his thighs broken)*

77 DURYODHANA—Oh ! here do I,

ನನ್ನನ್ನು ಹಿಂಬಾಲಿಸುತ್ತಿದ್ದಾನೆ. ಇವನೋ —

75 ಯುದ್ಧಭೂಮಿಯಲ್ಲಿನ ಶ್ರೀಗಂಧವಾದ ರಕ್ತದಿಂದ ತೊಯ್ದ ಅನುಲೇಪನದ ಕಾಂತಿಯುಳ್ಳ ಶ್ರೀಮಂತ; ಭೂಮಿಯ ಮೇಲೆ ಹರಿದಾಡುವುದರಿಂದ ಧೂಳಿಧೂಸರಿತವಾದ ಭುಜಗಳುಳ್ಳವನಾಗಿ ಎಳೆಯಮಕ್ಕಳ (ಹಾಗೆ ಆಚರಿಸುವ) ವ್ರತವನ್ನು ಕೈಗೊಳ್ಳುವಂತೆ ಮಾಡಲ್ಪಟ್ಟವನು; ಅಮೃತಮಂಥನ ಮುಗಿದ ಮೇಲೆ ಅಸುರರಿಂದೊಡಗೂಡಿದ ದೇವತೆಗಳಿಂದ (ಮಂದರ) ಪರ್ವತದ ದೆಸೆಯಿಂದ ಬಿಡುಗಡೆ ಮಾಡಲ್ಪಟ್ಟು ದಣಿದು ಬೆಂಡಾಗಿ ತನ್ನ ಶರೀರವನ್ನು ಸಮುದ್ರದ ನೀರಿನಿಂದ ಎಳೆದುಕೊಂಡು ಬರುತ್ತಿರುವ ವಾಸುಕಿಯಂತೆ (ಕಾಣಿಸುತ್ತಿದ್ದಾನೆ). [೨೯]

76 (ಬಳಿಕ ತೊಡೆಗಳೆರಡೂ ಮುರಿದ ದುರ್ಯೋಧನ ಪ್ರವೇಶಿಸುತ್ತಾನೆ)

77 ದುರ್ಯೋಧನ—ಓ ! ಇದೋ

78 भीमेन भित्वा समयव्यवस्थां *गदाभिघातक्षतजर्जरोरुः ।
भूमौ भुजाभ्यां परिकृष्यमाणं स्वं देहमर्धोपरतं वहामि ॥३०॥

79 प्रसीदतु प्रसीदतु भगवान् हलायुधः ।

80 त्वत्पादयोर्निपतितं पतितस्य भूमौ
एतच्छिरः प्रथममद्य विमुञ्च रोषम् ।
जीवन्तु ते कुरुकुलस्य निवापमेघाः
वैरं च विग्रह†कथाश्च वयं च नष्टाः ॥३१॥

* गदानिपात० † कथा च

78 with the thighs wounded and crushed by mace-blows by Bhīma violating the conventional statute, bear my half dead body which I am dragging on the earth (crawling) with my two arms. [30]

79 May the venerable weilder of the plough be appeased!

80 This head of myself fallen on the earth has bowed to your feet; now abandon (your) anger first; let the libation-giving clouds of the Kuru family live on; all enmity, talks of war, and even our-selves have come to an end.

78 (ಯುದ್ಧದ) ನಿಯಮಗಳ ವ್ಯವಸ್ಥೆಯನ್ನು ಮುರಿದ ಮೇಲೆ ಭೀಮನಿಂದಾದ ಗದಾಪ್ರಹಾರದಿಂದ ಗಾಯಗೊಂಡು ಜರ್ಜರಿತವಾದ ತೊಡೆಗಳುಳ್ಳ ನಾನು ಭೂಮಿಯ ಮೇಲೆ ತೋಳುಗಳ ಸಹಾಯದಿಂದ (ತೆವಳುತ್ತಾ) ಎಳೆಯಲ್ಪಡುತ್ತಿರುವ ಅರ್ಧ ಸತ್ತ ನನ್ನ ದೇಹವನ್ನು (ಇನ್ನೂ) ಹೊತ್ತಿದ್ದೇನೆ. [೩೦]

79 ಪ್ರಸನ್ನನಾಗಲಿ ! ಭಗವಾನ್ ಹಲಾಯುಧನು ಪ್ರಸನ್ನನಾಗಲಿ !

80 ಭೂಮಿಯ ಮೇಲೆ ಬಿದ್ದಿರುವ ನನ್ನೀ ತಲೆಯು ನಿನ್ನ ಕಾಲುಗಳಿಗೆ ಎರಗಿದೆ. ಇನ್ನು ರೋಷವನ್ನು ಮೊದಲು ಬಿಟ್ಟುಬಿಡು. ಕುರುಕುಲಕ್ಕೆ ಜಲಾಂಜಲಿ ನೀಡುವ ಮೇಘಗಳಂತಿರುವ ಅವರು ಬದುಕಿರಲಿ. ವೈರವೂ, ಯುದ್ಧದ ಮಾತುಗಳೂ, ನಾವೂ, ಎಲ್ಲವೂ ನಷ್ಟವಾಗಿಬಿಟ್ಟವು. [೩೧]

81 बलदेवः— भो दुर्योधन ! मुहूर्तं तावदात्मा धार्यताम् ।

82 दुर्योधनः— किं भवान् करिष्यति ?

83 बलदेवः—श्रूयताम् ,—

84 आक्षिप्तलाङ्गल†मुखोल्लिखितैः शरीरैः
निर्दारितांसहृदयान्मुसलप्रहारैः ।
दास्यामि संयुगहतान् सरथाश्वनागान्
स्वर्गानुयात्रपुरुषांस्तव पाण्डुपुत्रान् ॥३२॥

† मुखोल्लिखितान् शरीरान्

81 BALADEVA—O Duryodhana, just for a while, bear yourself.

82 DURYODHANA—What will you do?

83 BALADEVA—Listen,—

84 I will offer to you as followers faring to heaven the sons of Pāṇdu, who are slain in battle together with their chariots, horses and elephants, whose shoulders and chests are shattered by pestle-blows, and who are with bodies furrowed by the plough-share hurled at them. [32]

81 ಬಲದೇವ— ಓ ದುರ್ಯೋಧನ! ಮುಹೂರ್ತಕಾಲ ಜೀವ ಹಿಡಿದುಕೊ.

82 ದುರ್ಯೋಧನ—ನೀನೇನು ಮಾಡುವಿ ?

83 ಬಲದೇವ—ಕೇಳು—

84 ಎತ್ತಿ ಬೀಸಿದ ನೇಗಿಲ ಅಲಗಿನಿಂದ ಸೀಳಲ್ಪಟ್ಟ ಶರೀರಗಳಿಂದ ಕೂಡಿದ, ಒನಕೆಯ ಏಟುಗಳಿಂದ ನಜ್ಜುಗುಜ್ಜಾದ ಭುಜ ಮತ್ತು ಹೃದಯ ಗಳುಳ್ಳ, ಯುದ್ಧದಲ್ಲಿ ತಮ್ಮ ರಥ ಕುದುರೆ ಆನೆಗಳೊಡನೆ ಕೊಲ್ಲಲ್ಪಟ್ಟ ಪಾಂಡುಪುತ್ರರನ್ನು ಸ್ವರ್ಗಕ್ಕೆ ತೆರಳುತ್ತಿರುವ ನಿನಗೆ ಅನುಯಾತ್ರಿಕರನ್ನಾಗಿ ಕೊಡುವೆನು. [೩೨]

85 दुर्योधनः— मा मा भवानेवम् ।
86 प्रतिज्ञावसिते भीमे गते भ्रातृशते दिवम् ।
मयि चैवं गते राम ! विग्रहः किं करिष्यति ॥३३

87 बलदेवः—मत्प्रत्यक्षं वञ्चितो भवानित्युत्पन्नो मे रोषः ।

88 दुर्योधनः— वञ्चित इति मां भवान् मन्यते ?

89 बलदेवः— कः संशयः ?

90 दुर्योधनः— हन्त भोः ! दत्तमूल्या इव मे प्राणाः । कुतः,

---

85 DURYODHANA—Nay, say not so.

86 When Bhīma has fulfilled his vow, when my hundre brothers have gone to heaven, and when I too have com to this state, O Rāma! what can war do? [33

87 BALADEVA—My anger is roused because you have bee tricked before my very eyes.

88 DURYODHANA-You consider that I have been tricked?

89 BALADEVA—Why doubt (that)?

90 DURYODHANA—Alas! My life has been paid for, as i were. For,—

---

85 ದುರ್ಯೋಧನ – ಬೇಡ, ನೀನು ಹಾಗೆ ಅನ್ನಬೇಡ.

86 ಭೀಮನ ಪ್ರತಿಜ್ಞೆ ಮುಗಿದಿರುವಾಗ, (ನನ್ನ) ನೂರು ಸೋದರರು ಸ್ವರ್ಗಕ್ಕೆ ತೆರಳಿಬಿಟ್ಟಿರುವಾಗ, ನಾನೂ ಕೂಡ ಈ ಸ್ಥಿತಿಗೆ ಬಂದಿರುವಾಗ ಬಲರಾಮನೇ ! ಯುದ್ಧ ಏನು ಮಾಡಬಲ್ಲುದು ? [೩೩

87 ಬಲದೇವ—ನನ್ನ ಕಣ್ಣುಮುಂದೆ ನೀನು ವಂಚಿತನಾದೆಯೆಂದು ನನ ಈ ರೋಷ ಬಂದಿದೆ.

88 ದುರ್ಯೋಧನ-ವಂಚಿತನಾದವನೆಂದು ನನ್ನನ್ನು ನೀನು ಭಾವಿಸುತ್ತೀಯಾ

89 ಬಲದೇವ— ಸಂಶಯ ಏನು ?

90 ದುರ್ಯೋಧನ—ಅಬ್ಬ ! ನನ್ನ ಪ್ರಾಣಗಳಿಗೆ ಬೆಲೆ ಸಿಕ್ಕಂತಾಯಿತ ಯಾಕೆಂದರೆ,—

91 आदीप्तानलदारुणाज्जतुगृहाद्बुध्यात्मनिर्वाहिणा
युद्धे वैश्रवणालयेऽचलशिलावेग§प्रतीसारिणा ।
भीमेनाद्य हिडिम्बराक्षस†पतिप्राणप्रतिग्राहिणा
यद्येवं समवैषि मां छलजितं भो राम ! नाहं जितः ॥३४॥

92 बलदेवः—भीमसेन इदानीं तव युद्धवञ्चनामुत्पाद्य स्थास्यति ?

93 दुर्योधनः—किं चाहं भीमसेनेन वञ्चितः ?

§ प्रतिस्फालिना † परित्राणप्रतिग्राहिणा

---

91 I am not vanquished, O Rāma, if you think that I have been conquered through deception to-day by Bhīma, who (formerly) extricated himself through wit from the lac-house which was dreadful with blazing fire, who flung with force mountain-rocks in the fight in Kubera's abode, and who took away the life of the demon lord Hidimba. [34]

92 BALADEVA—Having tricked you in the battle, would Bhīmasena live now?

93 DURYODHANA—But, was I tricked by Bhīmasena?

---

91 ಉರಿಯುವ ಅಗ್ನಿಯಿಂದ ಭಯಂಕರವಾಗಿದ್ದ ಅರಗಿನ ಮನೆಯಿಂದ ಬುದ್ಧಿಬಲದಿಂದ ತನ್ನನ್ನು ಉಳಿಸಿಕೊಂಡ, ಯುದ್ಧದಲ್ಲಿ ಕುಬೇರನ ಸ್ಥಾನವಾದ ಗಂಧಮಾದನ ಪರ್ವತದ ಮೇಲೆ ಬೆಟ್ಟದ ಬಂಡೆಗಳನ್ನೇ ವೇಗದಿಂದ ಬೀಸಿ ಎಸೆದ, ಹಿಡಿಂಬನೆಂಬ ರಾಕ್ಷಸ ರಾಜನ ಪ್ರಾಣವನ್ನು ತೆಗೆದುಕೊಂಡ ಭೀಮನಿಂದ ನಾನಿಂದು ಈ ರೀತಿ ಮೋಸದಿಂದ ಜಯಿಸಲ್ಪಟ್ಟೆನೆಂದು ನೀನು ಭಾವಿಸುವಿಯಾದರೆ, ಎಲೌ ಬಲರಾಮನೇ, ನಾನು ಪರಾಜಿತನಾಗಿಲ್ಲ. [೩೪]

92 ಬಲದೇವ—ನಿನಗೆ ಯುದ್ಧದಲ್ಲಿ ವಂಚನೆಮಾಡಿ, ಭೀಮಸೇನನಿನ್ನು (ಬದುಕಿ) ಇರುವನೆ ?

93 ದುರ್ಯೋಧನ—ಆದರೆ, ನಾನು ಭೀಮಸೇನನಿಂದ ವಂಚಿತನಾದೆನೆ ?

94 बलदेवः—अथ केन भवानेवंविधः कृतः ?

95 दुर्योधनः—श्रूयताम् ।

96 येनेन्द्रस्य स पारिजाततरुर्मानेन तुल्यं हृतो
दिव्यं वर्षसहस्रमर्णवजले सुप्तश्च यो लीलया ।
तीव्रां भीमगदां प्रविश्य सहसा निर्व्याजयुद्धप्रियः
तेनाहं जगतः प्रियेण हरिणा मृत्योः प्रतिग्राहितः ॥३५॥

97 (नेपथ्ये) उत्सरतोत्सरतार्याः, उत्सरत ।

[उस्सरह, उस्सरह अय्या, उस्सरह ।]

---

94 BALADEVA—Then, by whom were you brought t
this plight?

95 DURYODHANA—Listen.

96 It was by him who took away the lovely *Pārijāt*
tree of Indra along with his pride, who slept playfully
thousand celestial years under ocean waters, and who is th
darling of the world. By that Hari, suddenly entering int
that sharp mace of Bhīma, I, whose love is for a fair fight
was given over to Death. [35

97 (*Behind the curtain*) Clear away, clear away sirs
clear away.

---

94 ಬಲದೇವ—ಹಾಗಾದರೆ, ನೀನೀ ವಿಧವಾಗಿ ಯಾರಿಂದ ಮಾಡಲ್ಪಟ್ಟಿ

95 ದುರ್ಯೋಧನ—ಕೇಳು.

96 ಯಾರಿಂದ ಇಂದ್ರನ ಆ ಪಾರಿಜಾತವೃಕ್ಷವು ಅವನ ಅಭಿಮಾನ
ಜತೆಯಲ್ಲೇ ಅಪಹೃತವಾಯಿತೋ, ಯಾವನು ಸಮುದ್ರದ ನೀರಿನಲ್ಲಿ ದೇ
ಮಾನದ ಸಾವಿರ ವರ್ಷಗಳ ಕಾಲ ಲೀಲಾಜಾಲವಾಗಿ ನಿದ್ದಿಸಿದನೋ, ಜಗತ
ಪ್ರಿಯನಾದ ಆ ಹರಿಯು ಭೀಮನ ತೀವ್ರವಾದ ಗದೆಯೊಳಕ್ಕೆ ತಟ್ಟ
ಪ್ರವೇಶಿಸಿ, ನಿಷ್ಕಪಟ ಯುದ್ಧದಲ್ಲೇ ಆಸಕ್ತನಾದ ನನ್ನನ್ನು ಯಮನು ಪ್ರ
ಗ್ರಹಿಸುವಂತೆ ಮಾಡಿಬಿಟ್ಟ. [೩೫

97 (ತೆರೆಯ ಹಿಂದೆ) ಸರಿಯಿರಿ, ಸರಿಯಿರಿ, ಆರ್ಯರೇ ಸರಿಯಿರಿ.

98 बलदेवः—(विलोक्य) अये अयमत्रभवान् धृतराष्ट्रः, ‡गान्धारी च, दुर्जयेनादेशितमार्गोऽन्तःपुरानुबन्धः शोकाभिभूतहृदयः† इत एव अभिवर्तते । य एषः,

99 वीर्याकरः सुतशतप्रविभक्तचक्षुः
§दर्पोद्यतः कनकयूपविलम्बबाहुः ।
सृष्टो ध्रुवं त्रिदिवरक्षणजातशङ्कैः
देवैररातितिमिराञ्जलिताडिताक्षः ॥३६॥

‡ गान्धार्या † Add चकितगतिः § दर्पोद्धतः

98 BALADEVA—*(Beholding)* Oh, his highness Dhṛtarāṣṭra, along with Gāndhāri, followed by the ladies of the harem and led by Durjaya, is coming this very way, with a heart overwhelmed by grief. And

99 he is a mine of valour. His vision is divided among his hundred sons. He is puffed up with pride. His arms are long like sacrificial posts of gold. Surely, by the gods doubtful of (their) protecting the heaven, he was created with eyes smitten with a handful of malignant darkness. [36]

98 ಬಲದೇವ-(ನೋಡಿ) ಓ, ಇದೋ ಪೂಜ್ಯ ಧೃತರಾಷ್ಟ್ರನು,-ಗಾಂಧಾರಿಯೂ ಸಹ,-ದುರ್ಜಯನಿಂದ ದಾರಿ ತೋರಿಸಲ್ಪಡುತ್ತಾ, ಅಂತಃಪುರಸ್ತ್ರೀಯರ ಪರಿವಾರದೊಡಗೂಡಿ, ಶೋಕಾವಿಷ್ಟಹೃದಯನಾಗಿ ಇತ್ತಲೇ ಬರುತ್ತಿದ್ದಾನೆ. ಇವನೋ—

99 ವೀರ್ಯದ ಗಣಿ; ನೂರುಜನ ಪುತ್ರರಲ್ಲಿ ಹಂಚಿಹೋದ ಕಣ್ಣುಳ್ಳವನು; ದರ್ಪದಿಂದ ಉಬ್ಬಿದವನು; ಚಿನ್ನದ ಯೂಪಸ್ತಂಭಗಳಂತೆ ಉದ್ದವಾದ ತೋಳುಳ್ಳವನು; ನಿಜವಾಗಿಯೂ ಸ್ವರ್ಗದ ರಕ್ಷಣೆಯಬಗ್ಗೆ ಭಯಗೊಂಡ ದೇವತೆಗಳಿಂದ ಶತ್ರುರೂಪಿ ಕತ್ತಲೆಯನ್ನು ಕೈತುಂಬ ಕಣ್ಣುಗಳಿಗೆ ಎರಚಿ ಸೃಷ್ಟಿಸಲ್ಪಟ್ಟವನು. [೩೬]

100 (ततः प्रविशति धृतराष्ट्रो गान्धारी देव्यौ दुर्जयश्च)

101 **धृतराष्ट्रः**—पुत्र क्वासि ?

102 **गान्धारी**—पुत्रक ! क्वासि ? [पुत्तअ ! कहिं सि ?]

103 **देव्यौ**—महाराज ! क्वासि ? [महाराअ ! कहिं सि ?]

104 **धृतराष्ट्रः**—भोः ! कष्टम् ।

105 **वञ्चनानिहतं श्रुत्वा सुतमद्याहवे मम ।**
मुखमन्तर्गतास्राक्षमन्धमन्धतरं कृतम् ॥३७॥

106 गान्धारि ! किं धरसे ?

---

100 *(Then enter Dhṛtarāṣtra, Gāndhārī, the two queens and Durjaya)*

101 Dhṛtarāṣtra—My son, where are you?

102 Gāndhārī—My child, where are you?

103 The two queens—Great king, where are you?

104 Dhṛtarāṣṭra—Oh alas !

105 To-day, having heard that my son was struck down deceitfully in a fight, my blind face has been made blinder, with the eyes tearful from inside. [37]

106 Gāndhāri, are you still holding your life?

---

100 (ಬಳಿಕ ಧೃತರಾಷ್ಟ್ರನು ಪ್ರವೇಶಿಸುತ್ತಾನೆ; ಗಾಂಧಾರೀ, ದೇವಿಯರಿಬ್ಬರು, ದುರ್ಜಯನೂ ಸಹ)

101 ಧೃತರಾಷ್ಟ್ರ—ಮಗನೇ ಎಲ್ಲಿದ್ದೀ?

102 ಗಾಂಧಾರೀ—ಮಗು, ಎಲ್ಲಿದ್ದೀಯೆ?

103 ದೇವಿಯರಿಬ್ಬರೂ—ಮಹಾರಾಜ, ಎಲ್ಲಿದ್ದೀರಿ?

104 ಧೃತರಾಷ್ಟ್ರ—ಅಯ್ಯೋ ಕಷ್ಟ!

105 ಯುದ್ಧದಲ್ಲಿಂದು ನನ್ನ ಮಗ ವಂಚನೆಯಿಂದ ಹತನಾದನೆಂದು ಕೇಳಿ, ಒಳಗೇ ಕಂಬನಿ ತುಂಬಿದ ಕಣ್ಣುಳ್ಳ ನನ್ನ ಕುರುಡು ಮುಖ ಮತ್ತೂ ಹೆಚ್ಚು ಕುರುಡಾಗಿ ಮಾಡಲ್ಪಟ್ಟಿದೆ. [೩೭]

106 ಗಾಂಧಾರಿ, ಬದುಕಿದ್ದೀಯಾ?

107 गान्धारी—जीवितास्मि मन्दभागा । [जीवाविदह्मि मन्दभाआ]

108 देव्यौ—महाराज ! महाराज ! [महाराअ ! महाराअ !]

109 राजा—भोः कष्टम् ! यन्ममापि स्त्रियो रुदन्ति ।

110 पूर्वं न जानामि गदाभिघात-
रुजामिदानीं तु समर्थयामि ।
यन्मे प्रकाशीकृतमूर्धजानि
रणं प्रविष्टान्यवरोधनानि ॥३८॥

111 धृतराष्ट्रः — गान्धारि ! किं दृश्यते दुर्योधननामधेयः कुलमानी ?

---

107 GĀNDHĀRĪ—An unfortunate woman, I am alive (still).

108 THE TWO QUEENS—O great king! O great king!

109 KING—Oh! Alas that even my wives are wailing!

110 Before this, I did not feel the pain of the mace-blow; now I feel it, because my wives have come into the war-field with their tresses exposed. [38]

111 DHṚTARĀṢṬRA—Gāndhārī, is he visible to you?—he, namely *Dur-yodhana*, who is full of family pride.

---

107 ಗಾಂಧಾರೀ—ಮಂದಭಾಗ್ಯೆ (ಇನ್ನೂ) ಜೀವಿಸಿದ್ದೇನೆ.

108 ದೇವಿಯರಿಬ್ಬರು—ಮಹಾರಾಜ ! ಮಹಾರಾಜ !

109 ರಾಜ—ಅಯ್ಯೋ ಕಷ್ಟ ! ನನ್ನ ಹೆಂಡತಿಯರೂ ಅಳುತ್ತಾರಲ್ಲ !

110 ಗದೆಯ ಏಟಿನ ನೋವನ್ನು ಈ ಮೊದಲು ನಾನು ಗಮನಿಸಿರಲಿಲ್ಲ. ಈಗ ಅದನ್ನು ತಿಳಿಯುತ್ತಿದ್ದೇನೆ; ಯಾಕೆಂದರೆ, ನನ್ನ ಅಂತಃಪುರದವರೂ ತಮ್ಮ ತಲೆಗೂದಲು ಹೊರಗೆ ಕಾಣಿಸುವಂತೆ (ಮುಸುಕನ್ನು ಒತ್ತರಿಸಿ) ಯುದ್ಧಭೂಮಿಗೆ ಬಂದುಬಿಟ್ಟಿದ್ದಾರೆ ! [೩೮]

111 ಧೃತರಾಷ್ಟ್ರ — ಗಾಂಧಾರಿ, ದುರ್ಯೋಧನ ಎಂಬ ಹೆಸರಿನ (ಆ) ಕುಲಾಭಿಮಾನಿಯು ಕಾಣಿಸುತ್ತಿದ್ದಾನೆಯೆ ?

112 गान्धारी—महाराज ! न दृश्यते । [महाराअ ! ण दिस्सदि ?]

113 धृतराष्ट्रः — कथं न दृश्यते ? हन्त भोः ! अद्यास्म्यहमन्धो योऽहमन्वेष्टव्ये काले पुत्रं न पश्यामि । भोः कृतान्तहतक !

114 रिपुसमरविमर्दं मानवीर्यप्रदीप्तं
सुतशतमतिधीरं वीरमुत्पाद्य †मानी ।
धरणितलविकीर्णं किं स योग्यो न भोक्तुं
सकृदपि धृतराष्ट्रः पुत्रदत्तं निवापम् ॥३९॥

† मानम्

112 GĀNDHĀRĪ—Not visible, great king.

113 DHṚTARĀṢTRA—What, not visible? Oh alas! To-day I am blind, as I cannot see my son at a time when he is to be looked for. Oh, accursed fate!

114 Having begot a hundred sons, very stead-fast and brave, destructive to the enemies' ranks, and resplendent with self-respect and valour, does not that proud Dhṛtarāṣtra deserve to get even for once the libation offered by a son and scattered on the surface of the earth? [39]

112 ಗಾಂಧಾರೀ—ಮಹಾರಾಜ, ಕಾಣಿಸುತ್ತಿಲ್ಲ.

113 ಧೃತರಾಷ್ಟ್ರ — ಏನು, ಕಾಣಿಸುತ್ತಿಲ್ಲವೇ ? ಅಯ್ಯೋ ! ಹುಡುಕಬೇಕಾದ ಕಾಲದಲ್ಲಿ, ಮಗನನ್ನು ನಾನು ಕಾಣಲಾರೆನಾದ್ದರಿಂದ ಇದೀಗ ನಾನು ಕುರುಡನಾಗಿದ್ದೇನೆ. ಓ ಹಾಳು ಅದೃಷ್ಟವೆ !

114 ಶತ್ರುಗಳನ್ನು ಯುದ್ಧದಲ್ಲಿ ಮರ್ದಿಸಬಲ್ಲ, ಮಾನ ಮತ್ತು ವೀರ್ಯಗಳಿಂದ ಬೆಳಗುವ, ತುಂಬ ಧೀರರಾದ, (ಈಗ) ಭೂತಲದಲ್ಲಿ ಚೆಲ್ಲಾಪಿಲ್ಲಿಯಾಗಿ ಬಿದ್ದಿರುವ, ನೂರು ಪುತ್ರರನ್ನು ಹೆತ್ತೂ ಅಭಿಮಾನಿಯಾದ ಈ ಧೃತರಾಷ್ಟ್ರನು ಒಂದು ಸಲವಾದರೂ ಪುತ್ರದತ್ತವಾದ ತಿಲೋದಕವನ್ನು ಅನುಭವಿಸಲು ಯೋಗ್ಯನಲ್ಲವೇನು ? [೩೯]

115 गान्धारी—जात सुयोधन ! देहि मे प्रतिवचनम् । पुत्रशत-विनाश*दुःखितं समाश्वासय महाराजम् । [जाद सुयोधण ! देहि मे पडिवअणं । पुत्तसदविणासदुक्खिदं समस्सासेहि महाराअं ।]

116 बलदेवः—अये, इयमत्रभवती गान्धारी ।

117 या पुत्रपौत्रवदनेष्वकुतूहलाक्षी
दुर्योधनास्तमितशोकनिपीतधैर्या ।
अस्रैरजस्रमधुना पतिधर्मचिह्नम्
आर्द्रीकृतं नयनबन्धमिदं दधाति ॥४०॥

* दुःस्थितं (दुःत्थिदं)

115 GĀNDHĀRI—Child Suyodhana, answer me. Console the great king who is grieving over the loss of a hundred sons.

116 BALADEVA—O! Here is her lady-ship Gāndhārī,

117 whose eyes never longed to see the faces of her sons and grandsons. She now wears the bandage on her eyes,—a symbol of devotion to her husband, which is wetted by the incessant flow of tears, her fortitude being lost on account of her grief at Duryodhana's fall. [40]

115 ಗಾಂಧಾರೀ — ಮಗು ಸುಯೋಧನ ! ನನಗೆ ಪ್ರತ್ಯುತ್ತರ ನೀಡು. ನೂರುಜನ ಪುತ್ರರ ವಿನಾಶದಿಂದ ದುಃಖಿತನಾದ ಮಹಾರಾಜನನ್ನು ಸಂತೈಸು.

116 ಬಲದೇವ— ಓ, ಇವಳು ಪೂಜ್ಯೆಯಾದ ಗಾಂಧಾರಿ;—

117 ಯಾವಳು (ತನ್ನ) ಪುತ್ರರ ಮತ್ತು ಪೌತ್ರರ ಮುಖಗಳಲ್ಲೂ ಕುತೂಹಲಗೊಳ್ಳದ ಕಣ್ಣುಳ್ಳವಳೋ ಅವಳು. ದುರ್ಯೋಧನನ ಪರಾಜಯ ದಿಂದುಂಟಾದ ಶೋಕದಿಂದ ಈಗ ಧೈರ್ಯಗುಂದಿದವಳಾಗಿ ಒಂದೇ ಸಮನೇ ಕಣ್ಣೀರುಗಳಿಂದ ತೊಯ್ದಿರುವ ಪತಿಧರ್ಮಚಿಹ್ನವಾದ ಈ ಕಣ್ಣುಪಟ್ಟಿಯನ್ನು ಧರಿಸಿದ್ದಾಳೆ. [೪೦]

118 धृतराष्ट्रः—पुत्र दुर्योधन ! अष्टादशाक्षौहिणीमहाराज, क्वासि ?

119 राजा—अद्यास्मि महाराजः ।

120 धृतराष्ट्रः—एहि पुत्रशतज्येष्ठ ! देहि मे प्रतिवचनम् ।

121 राजा—ददामि खलु प्रतिवचनम् । अनेन वृत्तान्तेन व्रीलितोऽस्मि ।

122 धृतराष्ट्रः—एहि पुत्र ! अभिवादयस्व माम् ।

123 राजा—अयमयमागच्छामि । (उत्थानं रूपयित्वा पतति) हा धिक् ! अयं मे द्वितीयः प्रहारः । कष्टं भोः !

---

118 DHṚTARĀṢTRA—My son, Duryodhana, the sovereign of eighteen army divisions! where are you?

119 THE KING—To-day, I am a sovereign.

120 DHṚTARĀṢTRA—O eldest of (my) hundred sons! come here; answer me.

121 KING—I am indeed answering you. I am ashamed of this affair.

122 DHṚTARĀṢTRA—Come, my son. Salute me.

123 KING—Here, here I come. *(Gesticulates rising up and falls.)* Oh fie! This is a second blow to me. Ah, alas!

---

118 ಧೃತರಾಷ್ಟ್ರ — ಪುತ್ರ ದುರ್ಯೋಧನ ! ಹದಿನೆಂಟು ಅಕ್ಷೌಹಿಣೀ (ಸೇನೆಯ) ಮಹಾರಾಜ ! ಎಲ್ಲಿದ್ದೀ ?

119 ರಾಜ — ಇಂದು ಮಹಾರಾಜನಾಗಿದ್ದೇನೆ.

120 ಧೃತರಾಷ್ಟ್ರ — ಬಾ, ನೂರು ಪುತ್ರರಲ್ಲಿ ಎಲ್ಲರಿಗಿಂತ ಹಿರಿಯವನೆ ! ನನಗೆ ಪ್ರತ್ಯುತ್ತರಕೊಡು.

121 ರಾಜ — ಪ್ರತ್ಯುತ್ತರ ಕೊಡುತ್ತಿದ್ದೇನಲ್ಲ ! ಈ ವೃತ್ತಾಂತದಿಂದ ನಾಚಿಕೊಂಡಿದ್ದೇನೆ.

122 ಧೃತರಾಷ್ಟ್ರ — ಬಾ ಮಗು, ನನಗೆ ಅಭಿವಾದನಮಾಡು.

123 ರಾಜ — ಇದೊ ಇದೊ ಬಂದೆ. (ಏಳುವುದನ್ನು ನಿರೂಪಿಸಿ ಬೀಳುತ್ತಾನೆ) ಹಾ ಧಿಕ್ ! ಇದು ನನಗೆ ಎರಡನೆಯ ಪೆಟ್ಟು. ಅಯ್ಯೋ ಕಷ್ಟ !

124 हृतं मे भीमसेनेन गदापातकचग्रहे ।
समम् ऊरुद्वयेनाद्य गुरोः पादाभिवन्दनम् ॥४१॥

125 गान्धारी—अत्र, जाते ! [एत्थ, जादा !]

126 देव्यौ—आर्ये ! इमे स्वः । [अय्ये ! इमा ह्म ।]

127 गान्धारी—अन्वेषेथां भर्तारम् । [अण्णेसह भत्तारं ।]

128 देव्यौ—गच्छावः मन्दभागे । [गच्छाव मन्दभाआ ।]

129 धृतराष्ट्रः—क एष भो ! मम वस्त्रान्तमाकर्षन् मार्गमादेशयति ?

---

124 To-day by Bhimasena, at the time of hurling the mace and seizing (me) by (my) hair, (my) salutation to my father's feet also was taken away along with the pair of my thighs. [41]

125 GĀNDHĀRĪ—Here, my (two) daughters.

126 THE TWO QUEENS—Revered lady, here we are.

127 GĀNDHĀRI—Find out your husband.

128 THE TWO QUEENS—We go unfortunate that we are.

129 DHṚTARĀṢTRA—Oh, who is this ?—he is leading me by pulling the hem of my robe.

---

124 ತಲೆಗೂದಲು ಹಿಡಿದುಕೊಂಡು ಗದೆಯು ಪೆಟ್ಟುಕೊಟ್ಟಾಗ ತೊಡೆಗಳೆರಡರ ಜತೆಯಲ್ಲೇ ಇಂದಿನ ನನ್ನ ಗುರುಪಾದವಂದನೆಯೂ ಭೀಮಸೇನನಿಂದ ಅಪಹೃತವಾಗಿಬಿಟ್ಟಿತು ! [೪೧]

125 ಗಾಂಧಾರೀ—ಇಲ್ಲಿ, ಪುತ್ರಿಯರೆ !

126 ದೇವಿಯರಿಬ್ಬರು—ಆರ್ಯೆ, ಇಲ್ಲಿದ್ದೇವೆ.

127 ಗಾಂಧಾರೀ—(ನಿಮ್ಮ) ಗಂಡನೆಲ್ಲಿದ್ದಾನೆ, ಹುಡುಕಿರಿ.

128 ದೇವಿಯರಿಬ್ಬರು—ಮಂದಭಾಗ್ಯೆಯರು ಹೋಗುತ್ತೇವೆ.

129 ಧೃತರಾಷ್ಟ್ರ—ಇದು ಯಾರಪ್ಪ, ನನ್ನ ಬಟ್ಟೆಯ ತುದಿಯನ್ನು ಎಳೆಯುತ್ತ ದಾರಿ ತೋರಿಸುತ್ತಿದ್ದಾನೆ ?

130 दुर्जयः—तात ! अहं दुर्जयः । [ताद ! अहं दुज्जओ ।]

131 धृतराष्ट्रः—पौत्र दुर्जय ! पितरमन्विच्छ ।

132 दुर्जयः—तात ! परिश्रान्तः खल्वहम् ।
[ताद ! परिस्सन्तो खु अहं ।]

133 धृतराष्ट्रः —गच्छ, पितुरङ्के विश्रमस्व ।

134 दुर्जयः—तात ! अहं गच्छामि । (उपसृत्य) तात ! कासि
[ताद ! अहं गच्छामि । (उपसृत्य) ताद ! कहिं सि ?]

135 राजा — अयमप्यागतः । भोः ! सर्वावस्थायां हृदयसन्नि
पुत्रस्नेहो मां दहति । कुतः,

---

130 DURJAYA—It is I, Durjaya, grand-pa.

131 DHṚTARĀṢṬRA — My grand-son Durjaya, look
your father.

132 DURJAYA—Grand-pa, I am so tired.

133 DHṚTARĀṢṬRA — You go and take rest on the la
your father.

134 DURJAYA—Grand-pa, here I go. *(Going near)* Fat
where are you ?

135 THE KING—He too has come. Oh ! Love for my
which is deeply set in my heart, whatever be my state, bu
me. For,—

---

130 ದುರ್ಜಯ—ತಾತ, ನಾನು ದುರ್ಜಯ.

131 ಧೃತರಾಷ್ಟ್ರ—ಪೌತ್ರ ದುರ್ಜಯ! ನಿನ್ನ ತಂದೆಯನ್ನು ಹುಡು

132 ದುರ್ಜಯ—ತಾತ, ನಾನು ತುಂಬ ದಣಿದುಬಿಟ್ಟಿದ್ದೇನೆ.

133 ಧೃತರಾಷ್ಟ್ರ—ಹೋಗು, ತಂದೆಯ ಮಡಿಲಲ್ಲಿ ವಿಶ್ರಮಿಸಿಕೊ.

134 ದುರ್ಜಯ — ತಾತ, ಹೋಗುತ್ತೇನೆ. (ಹತ್ತಿರ ಹೋಗಿ) ತ
ಎಲ್ಲಿದ್ದೀಯೆ ?

135 ರಾಜ—ಇವನೂ ಬಂದುಬಿಟ್ಟನೆ! ಅಹಾ, ಎಲ್ಲ ಅವಸ್ಥೆಯಲ್ಲೂ ಹೃ
ದೊಳಗೇ ಅಡಗಿರುವ ಪುತ್ರಸ್ನೇಹವು ನನ್ನನ್ನು ದಹಿಸುತ್ತಿದೆ. ಏಕೆಂದರೆ—

136 दुःखानामनभिज्ञो यो ममाङ्कशयनोचितः ।
निर्जितं दुर्जयो दृष्ट्वा किं नु मामभिधास्यति ॥४२॥
137 दुर्जयः— अयं महाराजो भूम्यामुपविष्टः ।
[अअं महाराओ भूमिए उवविट्ठो ।]
138 राजा—पुत्र ! किमर्थमिहागतः ?
139 दुर्जयः—त्वं चिरायसीति । [तुवं चिरायसि त्ति।]
140 राजा—अहो अस्यामवस्थायामपि पुत्रस्नेहो हृदयं दहति ।
141 दुर्जयः—अहमपि खलु ते अङ्के उपविशामि ।
[अहं पि खु दे अङ्के उवविसामि ।] (अङ्कमारोहति)

---

136 I wonder what Durjaya, ignorant of sorrows and accustomed to repose on my lap, will say on seeing me vanquished. [42]
137 DURJAYA—Here is the great king sitting on the ground.
138 THE KING—My son, why did you come here ?
139 DURJAYA—Because you are delaying.
140 THE KING — Ah ! even in this plight, love of the son burns the heart.
141 DURJAYA—I, as usual, will sit on your lap.
(Climbs on to his lap)

---

136 ದುಃಖಗಳನ್ನರಿಯದವನೂ ನನ್ನ ತೊಡೆಯ ಮೇಲೆ ಪವಡಿಸಲು ಯೋಗ್ಯನೂ ಆದ ಈ ದುರ್ಜಯನು ಪರಾಜಿತನಾದ ನನ್ನನ್ನು ಕಂಡು ಏನು ತಾನೆ ಹೇಳುವನೋ ? [೪೨]
137 ದುರ್ಜಯ—ಇದೊ ಮಹಾರಾಜನು ನೆಲದ ಮೇಲೆ ಕುಳಿತಿದ್ದಾನೆ.
138 ರಾಜ—ಮಗು, ಇಲ್ಲಿ ಏತಕ್ಕಾಗಿ ಬಂದೆ ?
139 ದುರ್ಜಯ—ನೀನು ತುಂಬ ಹೊತ್ತಾದರೂ ಬರಲಿಲ್ಲವೆಂದು.
140 ರಾಜ — ಅಹೋ ! ಈ ಅವಸ್ಥೆಯಲ್ಲೂ ಕೂಡ ಪುತ್ರಸ್ನೇಹವು ಹೃದಯವನ್ನು ಸುಡುತ್ತದೆ.
141 ದುರ್ಜಯ—ನಾನಿನ್ನು ನಿನ್ನ ತೊಡೆಯ ಮೇಲೆ ಕುಳಿತುಕೊಳ್ಳುತ್ತೇನೆ.
(ತೊಡೆಯ ಮೇಲೆ ಹತ್ತುತ್ತಾನೆ)

142 राजा—(निवार्य) दुर्जय ! दुर्जय ! भोः कष्टम् !

143 हृदयप्रीतिजननो यो मे नेत्रोत्सवः स्वयम् ।
सोऽयं कालविपर्यासाच्चन्द्रो वह्नित्वमागतः ॥४३॥

144 दुर्जयः—अङ्क उपवेशं किन्निमित्तं त्वं वारयसि ?
[अङ्के उववेसं किण्णिमित्तं तुवं वारेसि ?]

145 राजा—त्यक्त्वा परिचितं पुत्र ! यत्र यत्र त्वयास्यताम्
अद्य प्रभृति नास्तीदं पूर्वभुक्तं तवासनम् ॥४४

146 दुर्जयः—कुत्र नु खलु महाराजो गमिष्यति ?

---

142 THE KING–*(Preventing him)* Durjaya, Durjaya, Oh ala

143 This boy who has been the source of delight to (m heart, a festivity to my eyes, and virtually a moon, has the change of circumstance, attained the nature of fire. [4

144 DURJAYA-Why do you prevent my sitting on (your) la

145 THE KING — Leaving your wonted seat, my son, m you sit anywhere. From to-day, this seat, which y enjoyed earlier, does not exist. [4

146 DURJAYA—Where will the great king go, I wonder

---

142 ರಾಜ—(ತಡೆದು) ದುರ್ಜಯ, ದುರ್ಜಯ, ಅಯ್ಯೋ! ಕಷ್ಟ !

143 ಹೃದಯಕ್ಕೆ ಪ್ರೀತಿಯುಂಟುಮಾಡುವವನು; ನನ್ನ ಕಣ್ಣಿಗೆ ಹಬ್ಬ ಆದವನು; ಅಂತಹ ಈ (ಪುತ್ರ) ಚಂದ್ರನೂ ಕಾಲವ್ಯತ್ಯಾಸದಿಂದ ಅಗ್ನಿ ವನ್ನು ತಾಳಿಬಿಟ್ಟಿದ್ದಾನೆ. [೪

144 ದುರ್ಜಯ — ತೊಡೆಯ ಮೇಲೆ ಕುಳಿತುಕೊಳ್ಳುವುದನ್ನೇಕೆ ನೀ ತಪ್ಪಿಸುತ್ತೀ ?

145 ರಾಜ — ಪರಿಚಿತವಾದ ಈ ತೊಡೆಯನ್ನು ಬಿಟ್ಟು ಎಲ್ಲಿ ಬೇಕಾದ ಕುಳಿತುಕೊ. ಹಿಂದೆ ನೀನು ಅನುಭವಿಸುತ್ತಿದ್ದ ಈ ಆಸನವು ಇಂದಿನಿ ನಿನಗಿಲ್ಲ. [೪

146 ದುರ್ಜಯ—ಮಹಾರಾಜನು ಎಲ್ಲಿಗೆ ತೆರಳುವನೊ ?

[कहि णु हु महाराओ गमिस्सदि ?]

147 राजा—भ्रातृशतमनुगच्छामि ।

148 दुर्जयः—मामपि तत्र नय । [मं पि तहि णेहि ।]

149 राजा—गच्छ पुत्र ! एवं वृकोदरं ब्रूहि ।

150 दुर्जयः—एहि महाराज ! अन्विष्यसे ।

[एहि महाराअ ! अण्णेसीअसि ।]

151 राजा — पुत्र, केन ?

152 दुर्जयः—आर्ययार्येण सर्वेणान्तःपुरेण च ।

[अय्याए अय्येण सव्वेण अन्तेउरेण अ ।]

153 राजा—गच्छ, पुत्र ! नाहमागन्तुं समर्थः ।

---

147 THE KING—I'll follow my hundred brothers.

148 DURJAYA—Take me, too, there.

149 THE KING–Go my son; say thus to Vṛkodara (Bhīma).

150 DURJAYA Come, great king! you are being looked for.

151 THE KING—By whom, my son?

152 DURJAYA—By grand-ma, grand-pa and all the ladies of the harem.

153 THE KING—Go, my son; I am unable to come.

---

147 ರಾಜ—(ನನ್ನ) ನೂರು ಸೋದರರನ್ನು ಹಿಂಬಾಲಿಸಿ ಹೋಗುತ್ತೇನೆ.

148 ದುರ್ಜಯ—ನನ್ನನ್ನೂ ಅಲ್ಲಿಗೆ ಕರೆದುಕೊಂಡುಹೋಗು.

149 ರಾಜ—ಮಗು, ಹೋಗು; ವೃಕೋದರನೊಂದಿಗೆ ಹೀಗೆ ಹೇಳು.

150 ದುರ್ಜಯ—ಬಾ ಮಹಾರಾಜ, ನೀನು ಹುಡುಕಲ್ಪಡುತ್ತಿದ್ದೀ.

151 ರಾಜ—ಮಗು, ಯಾರಿಂದ?

152 ದುರ್ಜಯ—ಆರ್ಯೆಯಿಂದ, ಆರ್ಯನಿಂದ, ಎಲ್ಲ ಅಂತಃಪುರ ಸ್ತ್ರೀಯರಿಂದಲೂ.

153 ರಾಜ—ಹೋಗು, ಮಗು; ಬರಲು ನಾನು ಸಮರ್ಥನಾಗಿಲ್ಲ.

154 दुर्जयः—अहं त्वां नेष्यामि । [अहं तुमं णइस्सं ।]

155 राजा— बालस्तावदसि पुत्र !

156 दुर्जयः—(परिक्रम्य) आर्याः ! अयं महाराजः ।
[अय्या ! अअं महाराओ ।]

157 देव्यौ—हा हा ! महाराजः । [हा हा ! महाराओ ।]

158 धृतराष्ट्रः — कासौ महाराजः ?

159 गान्धारी—कुत्र मे पुत्रकः ? [कहिं मे पुत्तओ ?]

160 दुर्जयः— अयं महाराजो भूम्यामुपविष्टः ।
[अअं महाराओ भूमिए उवविट्ठो ।]

161 धृतराष्ट्रः—हन्त भोः ! किमयं महाराजः ?

---

154 DURJAYA—I will take you.

155 THE KING—You are just a boy, my son.

156 DURJAYA—(*Having moved about*) Revered mothers, here is the great king.

157 THE TWO QUEENS—Ah, alas! the great king!

158 DHṚTARĀṢTRA—Where is the great king!

159 GĀNDHĀRĪ—Where is my dear son?

160 DURJAYA-Here is the great king seated on the ground.

161 DHṚTARĀṢTRA—Oh alas! is this the great king?

---

154 ದುರ್ಜಯ—ನಾನು ನಿನ್ನನ್ನು ಕರೆದುಕೊಂಡು ಹೋಗುತ್ತೇನೆ.

155 ರಾಜ—ನೀನಿನ್ನೂ ಹುಡುಗ, ಮಗನೆ!

156 ದುರ್ಜಯ—(ನಡೆದು ಹೋಗಿ) ಆರ್ಯರೆ, ಇದೊ ಮಹಾರಾಜ.

157 ದೇವಿಯರಿಬ್ಬರೂ—ಹಾ ಹಾ ಮಹಾರಾಜ!

158 ಧೃತರಾಷ್ಟ್ರ—ಈ ಮಹಾರಾಜನೆಲ್ಲಿ ?

159 ಗಾಂಧಾರೀ—ನನ್ನ ಮಗು ಎಲ್ಲಿ ?

160 ದುರ್ಜಯ—ಇದೊ, ಮಹಾರಾಜ ನೆಲದಮೇಲೆ ಕುಳಿತಿದ್ದಾನೆ.

161 ಧೃತರಾಷ್ಟ್ರ—ಅಯ್ಯೋ ಕಷ್ಟ! ಈತನೇ ಮಹಾರಾಜನೆ ?

162 यः काञ्चनस्तम्भसमप्रमाणो लोके किलैको वसुधाधिपेन्द्रः ।
कृतः स मे भूमिगतस्तपस्वी द्वारेन्द्रकीलार्धसमप्रमाणः ॥४५॥

163 गान्धारी — जात सुयोधन ! परिश्रान्तोऽसि ?

[जाद सुयोधण ! परिस्संन्तोसि ?]

164 राजा—भवत्याः खल्वहं पुत्रः ।

165 धृतराष्ट्रः — केयं भोः ?

166 गान्धारी—महाराज ! अहमभीतपुत्रप्रसविनी ।

[महाराअ ! अहमभीदपुत्तप्पसविणी ।]

---

162 He, who was of the same stature as of a golden pillar, and who, it is well-known, was in this world the sole over-lord of kings,—is that son of mine made so miserable as to lie on the ground in the same manner as the broken bolt of a door? [45]

163 GĀNDHĀRĪ—My son, Suyodhana, are you much tired?

164 THE KING—I am surely your ladyship's son.

165 DHṚTARĀṢTRA—O, who is this lady here?

166 GĀNDHĀRĪ—Great king, it is I, who gave birth to fearless sons.

---

162 ಯಾವನು ಚಿನ್ನದ ಸ್ತಂಭಕ್ಕೆ ಸಮನಾದ ಪ್ರಮಾಣವುಳ್ಳವನೂ ಲೋಕದಲ್ಲಿ ಒಬ್ಬನೇ ರಾಜಾಧಿರಾಜನೂ ಆಗಿದ್ದನೋ, ಆ ನನ್ನ ಮಗನು ಹೆಬ್ಬಾಗಿಲ ಮುರಿದ ಅಗುಣಿಯ ರೀತಿಯಲ್ಲಿ ಶೋಚನೀಯನಾಗಿ ನೆಲದಮೇಲೆ ಬಿದ್ದಿರುವಂತೆ ಮಾಡಲ್ಪಟ್ಟಿದ್ದಾನೆ ! [೪೫]

163 ಗಾಂಧಾರೀ—ಮಗು ಸುಯೋಧನ, ಪರಿಶ್ರಾಂತನಾಗಿದ್ದೀಯಾ ?

164 ರಾಜ—ನಾನು ನಿನ್ನ ಮಗನೇ ಅಲ್ಲವೆ ?

165 ಧೃತರಾಷ್ಟ್ರ—ಓಹೋ ! ಇವಳು ಯಾರು ?

166 ಗಾಂಧಾರೀ—ಮಹಾರಾಜ, ನಾನು ; ಭಯಭೀತರಾಗದ ಪುತ್ರರನ್ನು ಹಡೆದವಳು.

167 राजा — अद्योत्पन्नमिवात्मानमवगच्छामि । भोस्तात ! किमिदानीं वैक्लव्येन ?

168 धृतराष्ट्रः—पुत्र ! कथमविक्लवो भविष्यामि ?

169 यस्य वीर्यबलोत्सिक्तं संयुगाध्वरदीक्षितम् ।
पूर्वं भ्रातृशतं नष्टं त्वय्येकस्मिन् हते हतम् ॥४६॥ (पतति)

170 राजा — हा धिक् ! पतितोऽत्रभवान् । तात ! समाश्वासय अत्रभवतीम् ।

171 धृतराष्ट्रः—पुत्र ! किमिति समाश्वासयामि ?

---

167 The king—I feel as if I am born to-day. O father! what is the use of being uneasy now?

168 Dhṛtarāṣtra—How can I help being uneasy?

169 Your hundred brothers proud of (their) valour and strength and consecrated for the sacrifice called battle, are already lost. (Now) with your single death, all are dead.[46]

(Falls down)

170 The king—Ah, alas! my revered father has fallen! Oh father, console her ladyship (my mother)!

171 Dhṛtarāṣtra—My son, with what words shall I console?

---

167 ರಾಜ—ಇಂದು ಹುಟ್ಟಿದವನೆಂಬಂತೆ ನನ್ನನ್ನು ಭಾವಿಸುತ್ತೇನೆ. ತಂದೆಯೆ, ಈಗ ವೈಕ್ಲವ್ಯದಿಂದೇನು ಪ್ರಯೋಜನ?

168 ಧೃತರಾಷ್ಟ್ರ—ಪುತ್ರನೆ, ಹೇಗೆತಾನೆ ವೈಕ್ಲವ್ಯವಿಲ್ಲದವನಾದೇನು?

169 ಯಾವ ನಿನ್ನ ನೂರು ಸೋದರರು ವೀರ್ಯ ಬಲಗಳಿಂದ ಉತ್ಸಿಕ್ತರಾಗಿಯೂ ಯುದ್ಧವೆಂಬ ಯಾಗದಲ್ಲಿ ದೀಕ್ಷಿತರಾಗಿಯೂ ಇದ್ದರೋ ಅವರು (ಮಾತ್ರ) ಹಿಂದೆ ನಷ್ಟವಾಗಿ ಹೋಗಿದ್ದರು; ನೀನೊಬ್ಬ (ಇಂದು) ಹತನಾಗಲಾಗಿ ಎಲ್ಲರೂ ಹತರಾಗಿ ಬಿಟ್ಟಿದ್ದಾರೆ. [೪೬] (ಬೀಳುತ್ತಾನೆ)

170 ರಾಜ—ಹಾ ಕಷ್ಟ! ಪೂಜ್ಯನು ಬಿದ್ದುಬಿಟ್ಟಿದ್ದಾನೆ. ತಂದೆಯೇ, ಈ ಪೂಜ್ಯೆಯನ್ನು ಸಮಾಧಾನ ಪಡಿಸು.

171 ಧೃತರಾಷ್ಟ್ರ—ಪುತ್ರನೇ, ಏನೆಂದು ಸಮಾಧಾನಪಡಿಸಲಿ?

172 राजा — अपराङ्मुखो युधि हत इति । भोस्तात ! शोकनिग्रहेण क्रियतां ममानुग्रहः ।

173 त्वत्पादमात्रप्रणताग्रमौलिर्ज्वलन्तमप्यग्निमचिन्तयित्वा ।
येनैव मानेन समं प्रसूतस्तेनैव मानेन दिवं प्रयामि ॥४७॥

174 धृतराष्ट्रः—
वृद्धस्य मे जीवितनिःस्पृहस्य निसर्गसम्मीलितलोचनस्य ।
धृतिं निगृह्यात्मनि संप्रवृत्तस्तीव्रस्समाक्रामति पुत्रशोकः ॥४८॥

---

172 THE KING—That I was slain when face to-face with the foe. O father, favour me by restraining (your) grief.—

173 With my crest bowed down only at your feet, I, regardless of even the blazing fire, depart for heaven with the same pride as I was born with. [47]

174 DHṚTARĀṢTRA—Bitter grief on accouut of my sons, arisen in me subduing (my) fortitude, over-powers me, an old man, with no desire to live and with eyes completely closed by nature. [48]

---

172 ರಾಜ—ಅಪರಾಙ್ಮುಖನಾಗಿ ಯುದ್ಧದಲ್ಲಿ ಹತನಾದನೆಂದು. ತಂದೆಯೆ, (ನಿನ್ನ) ಶೋಕವನ್ನು ಅಡಗಿಸಿಕೊಳ್ಳುವುದರ ಮೂಲಕ ನನ್ನ ಮೇಲೆ ಅನುಗ್ರಹಮಾಡು.

173 ನಿನ್ನ ಪಾದಗಳಿಗೆ ಮಾತ್ರ ಪ್ರಣಾಮ ಮಾಡಿದ ಕಿರೀಟಾಗ್ರವುಳ್ಳವನಾಗಿ, ಉರಿಯುತ್ತಿರುವ ಅಗ್ನಿಯನ್ನೂ ಲೆಕ್ಕಿಸದೆ, ಯಾವ ಅಭಿಮಾನದೊಡನೆ ನಾನು ಹುಟ್ಟಿದೆನೋ ಅದೇ ಅಭಿಮಾನದೊಡನೆ ಸ್ವರ್ಗಕ್ಕೆ ಹೋಗುತ್ತೇನೆ. [೪೭]

174 ಧೃತರಾಷ್ಟ್ರ—ವೃದ್ಧನೂ ಜೀವಿತದಲ್ಲಿ ಆಸೆಯಿಲ್ಲದವನೂ ಸ್ವಾಭಾವಿಕವಾಗಿಯೇ ಮುಚ್ಚಿಹೋದ ಕಣ್ಣುಳ್ಳವನೂ ಆದ ನನ್ನ ಧೈರ್ಯವನ್ನು ಅಡಗಿಸಿ, ನನ್ನೊಳಗೇ ಉಂಟಾಗಿರುವ ತೀವ್ರವಾದ ಪುತ್ರಶೋಕವು ನನ್ನನ್ನು ಪೂರ್ಣವಾಗಿ ಆಕ್ರಮಿಸಿಕೊಳ್ಳುತ್ತಿದೆ. [೪೮]

175 बलदेवः—भोः कष्टम् !

176 दुर्योधननिराशस्य नित्यास्तमितचक्षुषः ।
न शक्नोम्यत्रभवतः कर्तुमात्मनिवेदनम् ।।४९।।

177 राजा—विज्ञापयाम्यत्रभवतीम् ।

178 गान्धारी—भण जात ! [भण जाद !]

179 राजा—नमस्कृत्य वदामि त्वां यदि पुण्यं मया कृतम् ।
अन्यस्यामपि जात्यां मे त्वमेव जननी भव ।।

180 गान्धारी — मम मनोरथः खलु त्वया भणितः ।

---

175 BALADEVA—Oh, alas!

176 I am unable to announce myself to this revered person who has lost all hope for Duryodhana and whose eyes are blinded for ever. [49]

177 THE KING - I woutd prefer a request to your ladyship.

178 GĀNDHĀRĪ — Speak out my son.

179 THE KING—Having bowed down, I tell you. If any merit is earned by me, you alone be my mother even in another birth. [50]

180 GĀNDHĀRĪ—My own desire has been voiced by you.

---

175 ಬಲದೇವ—ಅಯ್ಯೋ ಕಷ್ಟ!

176 ದುರ್ಯೋಧನನ ವಿಚಾರದಲ್ಲಿ ನಿರಾಶೆಗೊಂಡ, ಶಾಶ್ವತವಾಗಿಯೇ ಕುರುಡಾಗಿಬಿಟ್ಟಿರುವ ಕಣ್ಣುಳ್ಳ, ಈ ಪೂಜ್ಯನಿಗೆ ನನ್ನನ್ನು ನಿವೇದಿಸಿಕೊಳ್ಳಲೂ ಅಶಕ್ತನಾಗಿದ್ದೇನೆ. [೪೯]

177 ರಾಜ—ಪೂಜ್ಯಳಲ್ಲಿ ಅರಿಕೆ ಮಾಡಿಕೊಳ್ಳುತ್ತೇನೆ.

178 ಗಾಂಧಾರೀ—ಹೇಳು, ಮಗು.

179 ರಾಜ—ನಮಸ್ಕರಿಸಿ ನಿನಗೆ ಹೇಳುತ್ತೇನೆ,—ನನ್ನಿಂದ ಪುಣ್ಯಮಾಡಲ್ಪಟ್ಟಿದ್ದರೆ ಇನ್ನೊಂದು ಜನ್ಮದಲ್ಲೂ ನೀನೇ ನನಗೆ ಜನನಿಯಾಗು. [೫೦]

180 ಗಾಂಧಾರೀ—ನನ್ನ ಮನೋರಥವೇ ನಿನ್ನಿಂದ ನುಡಿಯಲ್ಪಟ್ಟಿತು.

[मम मणोरहो खु तुए भणिदो।]

181 राजा— मालवि ! त्वमपि शृणु ।

182 भिन्ना मे भ्रुकुटी गदानिपतितैर्व्यायुद्धकालोत्थितैः
वक्षस्युत्पतितैः प्रहाररुधिरैर्हारावकाशो हृतः ।
पश्येमौ व्रणकाञ्चनाङ्गदधरौ पर्याप्तशोभौ भुजौ
भर्ता ते न पराङ्मुखो युधि हतः किं क्षत्रिये ! रोदिषि ॥

183 देवी—बाला एषा सहधर्मचारिणी रोदिमि ।

[बाळा एसा सहधम्मचारिणी रोदामि ।]

184 राजा—पौरवि, त्वमपि शृणु ।

---

181 THE KING—Mālavi, you too listen.

182 My brow is broken by mace-blows inflicted at the time of the duel. Space for a garland on my chest has been taken away by the gushing blood of the cuts. Look at these two arms sufficiently adorned wearing the golden armlets of wounds. Your husband has been struck down in the fight even as he never turned his face away (from the foe). Why do you weep? O warrior-lady! [51]

183 THE QUEEN–I, a girl, weep beeing your partner in life.

184 THE KING—Pauravī, you too listen.

---

181 ರಾಜ—ಮಾಲವಿ, ನೀನೂ ಆಲಿಸು.

182 ಘೋರವಾದ ಯುದ್ಧಕಾಲದಲ್ಲಿ ಉಂಟಾದ ಗದಾಪ್ರಹಾರಗಳಿಂದ ನನ್ನ ಹುಬ್ಬು ಹರಿದುಹೋಗಿದೆ. ಪ್ರಹಾರದಿಂದ ಚಿಮ್ಮಿದ ರಕ್ತಗಳಿಂದ ಎದೆಯಲ್ಲಿ ಹಾರಗಳ ಸ್ಥಾನವು ಅಪಹೃತವಾಗಿಬಿಟ್ಟಿದೆ. ಗಾಯಗಳೆಂಬ ಚಿನ್ನದ ತೋಳ್ಬಳೆ ಧರಿಸಿರುವ ಮತ್ತು ಸಾಕಷ್ಟು ಹೊಳೆಯುತ್ತಿರುವ ಈ ಭುಜಗಳೆರಡನ್ನೂ ನೋಡು. ಎಲೌ ಕ್ಷತ್ರಿಯ ಸ್ತ್ರೀಯೆ! ನಿನ್ನ ಗಂಡನು ಯುದ್ಧದಲ್ಲಿ ಹತನಾದುದು ಪರಾಙ್ಮುಖನಾಗಿ ಅಲ್ಲ; ಏತಕ್ಕಾಗಿ ಅಳುತ್ತೀ?

183 ದೇವೀ–ನಾನು ಬಾಲೆ; ನಿಮ್ಮ ಸಹಧರ್ಮಚಾರಿಣಿಯಾಗಿ ಅಳುತ್ತಿದ್ದೇನೆ.

184 ರಾಜ—ಪೌರವಿ, ನೀನೂ ಆಲಿಸು.

185 वेदोक्तैर्विविधैर्मखैरभिमतैरिष्टं धृता बान्धवाः
शत्रूणामुपरि स्थितं प्रियशतं न व्यंसिताः संश्रिताः ।
युद्धेऽष्टादशवाहिनीनृपतयः सन्तापिता निग्रहे
मानं मानिनि ! वीक्ष्य मे न हि रुदन्त्येवं विधानां स्त्रियः ॥

186 पौरवी—एककृतप्रवेशनिश्चया न रोदिमि ।
[एक्ककिदप्पवेसणिच्चआ ण रोदामि ।]

187 राजा— दुर्जय ! त्वमपि शृणु ।

---

185 Various desirable sacrifices enjoined by the Vedas have been performed. Relatives have been supported. Enemies have been vanquished. The dependents have not been deprived of a hundred pleasures. The kings leading the eighteen army divisions in battle were tortured under imprisonment. O proud lady, notice my pride; for, wives of such men do not weep. [52]

186 PAURAVĪ—With the sole resolve of entering (fire with you), I do not weep.

187 THE KING—Durjaya, you too listen.

---

185 ವೇದೋಕ್ತವಾದ ಮತ್ತು (ನನಗೆ) ಅಭಿಮತವಾದ ವಿವಿಧ ಯಜ್ಞಗಳನ್ನು ಮಾಡಿದ್ದಾಗಿದೆ; ಬಾಂಧವರು ಸಂರಕ್ಷಿತರಾಗಿದ್ದಾರೆ; ಶತ್ರುಗಳನ್ನು ಅಡಗಿಸಿ ಅವರಿಗಿಂತ ಮೇಲಾಗಿದ್ದುದಾಗಿದೆ; ಆಶ್ರಿತರು ತಮ್ಮ ನೂರಾರು ಇಷ್ಟಗಳಿಂದ ವಂಚಿತರಾಗುವಂತೆ ಮಾಡಲ್ಪಟ್ಟಿಲ್ಲ; ಯುದ್ಧದಲ್ಲಿ ಹದಿನೆಂಟು ಸೇನೆಗಳ (ನಾಯಕರಾದ) ರಾಜರೂ (ನನ್ನಿಂದ) ಪರಾಜಿತರಾದ ಸಮಯದಲ್ಲಿ ಸಂತಾಪಕ್ಕೀಡುಮಾಡಲ್ಪಟ್ಟರು. ಎಲೌ ಮಾನಿನಿ, ನನ್ನ ಈ ಮಾನವನ್ನು ಕಣ್ಣಾರ ನೋಡು; ಇಂತಹವರ ಹೆಂಡತಿಯರು ಅಳುವುದಿಲ್ಲವಲ್ಲವೆ? [೫೨]

186 ಪೌರವೀ—(ಅಗ್ನಿ) ಪ್ರವೇಶಮಾಡುವುದೆಂಬ ಒಂದೇ ನಿಶ್ಚಯ ಮಾಡಿ ಬಿಟ್ಟಿರುವ ನಾನು ಅಳುವುದಿಲ್ಲ.

187 ರಾಜ—ದುರ್ಜಯ, ನೀನೂ ಆಲಿಸು.

188 **धृतराष्ट्रः**— गान्धारि ! किं नु खलु वक्ष्यति ?

189 **गान्धारी**— अहमपि तदेव चिन्तयामि ।

[अहं पि तं एव्व चिन्तेमि ।]

190 **राजा**—अहमिव पाण्डवाः शुश्रूषयितव्याः; तत्रभवत्याश्चांबायाः कुन्त्या निदेशो वर्तयितव्यः । अभिमन्योर्जननी द्रौपदी चोभे मातृवत् पूजयितव्ये । पश्य, पुत्र !

191 **श्लाघ्यश्रीरभिमानदीप्तहृदयो दुर्योधनो मे पिता**
तुल्येनाभिमुखं रणे हत इति त्वं शोकमेवं त्यज ।
स्पृष्ट्वा चैव युधिष्ठिरस्य विपुलं क्षौमापसव्यं भुजं
देयं पाण्डुसुतैस्त्वया मम समं नामावसाने जलम् ॥५३॥

---

188 DHṚTARĀṢṬRA—Gāndhārī, what is he going to say ?

189 GANDHĀRĪ—I am also wondering similarly.

190 THE KING—The Pāṇḍavas are to be served like myself. The direction of her ladyship mother Kuntī must be followed. Abhimanyu's mother (Subhadrā) and Draupadī, both of them must be honoured like your own mother. Look, my son.—

191 'My father Duryodhana of glorious splendour and of a heart lit up with pride was slain by an equal while

---

188 ಧೃತರಾಷ್ಟ್ರ—ಗಾಂಧಾರಿ, ಅವನೇನನ್ನು ಹೇಳುವುದಾಗಿರಬಹುದು ?

189 ಗಾಂಧಾರೀ—ನಾನೂ ಅದನ್ನೇ ಯೋಚಿಸುತ್ತಿದ್ದೇನೆ.

190 ರಾಜ—ನಾನು ಹೇಗೋ ಹಾಗೆ ಪಾಂಡವರು ಶುಶ್ರೂಷಿಸಲ್ಪಡಬೇಕು. ಪೂಜ್ಯೆಯಾದ ತಾಯಿ ಕುಂತಿಯ ಅಪ್ಪಣೆಯೂ ಪಾಲಿಸಲ್ಪಡಬೇಕು. ಅಭಿಮನ್ಯುವಿನ ಜನನಿ (ಸುಭದ್ರೆ) ಮತ್ತು ದ್ರೌಪದೀ ಇಬ್ಬರೂ ತಾಯಂದಿರಂತೆ ಪೂಜಿಸಲ್ಪಡಬೇಕು. ನೋಡು, ಪುತ್ರನೇ!

191 'ಶ್ಲಾಘ್ಯವಾದ ಸಂಪತ್ತುಳ್ಳ, ಅಭಿಮಾನದಿಂದ ಬೆಳಗುತ್ತಿದ್ದ ಹೃದಯವುಳ್ಳ ನನ್ನ ತಂದೆ ದುರ್ಯೋಧನನು ತನಗೆ ಸರಿಸಮಾನನಾದವನೊಡನೆ

192 बलदेवः—अहो वैरं पश्चात्तापः संवृत्तः ! अये शब्द इव ।

193 सन्नाहदुन्दुभिनिनादवियोगमूके
विक्षिप्तबाणकवचव्यजनातपत्रे ।
कस्यैष कार्मुकरवो हतसूतयोधे
विभ्रान्तवायसगणं गगनं करोति ॥५४॥

---

facing him in fight'—with this (satisfaction), you abandon your grief. And, when my name is at an end, you must offer me the libation of water, along with the other sons of Pāṇdu, having touched Yudhiṣṭhira's mighty shoulder over which the silk cloth is worn in the *apasavya* way. [53]

192 BALADEVA—Oh ! Enmity has turned into repentance. Ey, something like a sound !

193 When it is still with the absence of the roll of battle-drums, when arrows, armours, chauries and umbrellas are cast aside, when charioteers and warriors are slain,—(at such a time), whose bow-twang is this that is rendering the sky (be filled) with flocks of frightened crows ? [54]

ಯುದ್ಧದಲ್ಲಿ ಅಭಿಮುಖನಾಗಿ ಹತನಾದನು'—ಎಂಬುದನ್ನು ಗಮನಿಸಿ ನಿನ್ನ ಈ ಬಗೆಯ ಶೋಕವನ್ನು ತ್ಯಜಿಸು; ಮತ್ತು ನನ್ನ ಮರಣಾನಂತರ ನೀನು ಯುಧಿಷ್ಠಿರನ ಪರಿಪುಷ್ಟವಾದ ಮತ್ತು ರೇಷ್ಮೆ ಮುಗುಟವನ್ನು ಪ್ರಾಚೀನಾವೀತಿಯಾಗಿ ಹೊದೆದ ಭುಜವನ್ನು ಮುಟ್ಟಿಕೊಂಡೇ ಪಾಂಡುಸುತರೊಡನೆ ನನಗೆ ಜಲಾಂಜಲಿಯನ್ನು ಕೊಡಬೇಕು. [೫೩]

192 ಬಲದೇವ—ಆಶ್ಚರ್ಯ! ವೈರವು ಪಶ್ಚಾತ್ತಾಪವಾಗಿಬಿಟ್ಟಿದೆ. ಓ, ಏನೋ ಶಬ್ದದಂತೆ (ಕೇಳಿಸುತ್ತಿದೆ).

193 (ಯುದ್ಧ) ಸನ್ನಾಹ (ಸೂಚಕವಾದ) ನಗಾರಿಯ ನಿನಾದವಿಲ್ಲದೆ ನಿಃಶಬ್ದವಾಗಿರಲು, ಬಾಣ ಕವಚ ಚಾಮರ ಛತ್ರಿಗಳು ಬಿಸಾಡಲ್ಪಟ್ಟಿರಲು, ಸೂತರೂ ಸೈನಿಕರೂ ಹತರಾಗಿರಲು, ಯಾರ ಧನುಷ್ಟಂಕಾರ ಶಬ್ದ ಇದು ?—ಆಕಾಶವನ್ನು ಹೆದರಿದ ಕಾಗೆಗಳ ಹಿಂಡು ಉಳ್ಳದ್ದನ್ನಾಗಿ ಮಾಡುತ್ತಿದೆ! [೫೪]

194 (नेपथ्ये)

दुर्योधनेनाततकार्मुकेण यो युद्धयज्ञः सहितः प्रविष्टः ।
तमेव भूयः †प्रविशामि शून्यमध्वर्युणा वृत्तमिवाश्वमेधम् ॥५५॥

195 बलदेवः—अये, अयं गुरुपुत्रोऽश्वत्थामेत एवाभिवर्तते! य एषः

196 स्फुटितकमलपत्रस्पष्टविस्तीर्णदृष्टिः
रुचिरकनकयूपव्यायतालम्बबाहुः ।
सरभसमयमुग्रं कार्मुकं कर्षमाणः
सदहन इव मेरुः शृङ्गलग्नेन्द्रचापः ॥५६॥

† प्रविशाम्यशून्यं०

194 *(Behind the curtain)* The same war-sacrifice which I had entered into along with Duryodhana who had strung his bow, I enter once again now, just as one enters into the yard of a horse-sacrifice which is over and (hence) void of the sacrificer. [55]

195 BALADEVA — Oh, here is my preceptor's son, As'vatthāman, coming this very way.

196 He has eyes that are large and clear as the petals of the fully blown lotus; he is endowed with arms that are

194 (ತೆರೆಯ ಹಿಂದೆ) ಹೆದೆಯೇರಿಸಿದ ಬಿಲ್ಲು ಹಿಡಿದ ದುರ್ಯೋಧನ ನೊಡಗೂಡಿ ಯಾವ ಯುದ್ಧಯಜ್ಞವು ಪ್ರವಿಷ್ಟವಾಗಿತ್ತೋ ಅದನ್ನೇ ಪುನಃ ಪ್ರವೇಶಿಸುತ್ತೇನೆ,—ಮುಗಿದುಹೋದ (ಆದ್ದರಿಂದಲೇ) ಅಧ್ವರ್ಯುಶೂನ್ಯವಾದ ಅಶ್ವಮೇಧವನ್ನು ಹೇಗೋ ಹಾಗೆ. [೫೫]

195 **ಬಲದೇವ**—ಓ, ಇವನು ಗುರುಪುತ್ರನಾದ ಅಶ್ವತ್ಥಾಮ; ಇತ್ತಲೇ ಬರುತ್ತಿದ್ದಾನೆ. ಇವನೋ—

196 ಅರಳಿದ ಕಮಲದ ದಳದಂತೆ ಸ್ಪಷ್ಟವೂ ವಿಸ್ತಾರವೂ ಆದ ಕಣ್ಣುಳ್ಳವನು; ಸುಂದರವಾದ ಚಿನ್ನದ ಯೂಪಸ್ತಂಭದಂತೆ ದಷ್ಟಪುಷ್ಟವೂ ಉದ್ದವೂ ಆದ ಬಾಹುಗಳುಳ್ಳವನು; ಭಯಂಕರವಾದ ಧನುಸ್ಸನ್ನು ರಭಸದಿಂದೆಳೆಯುತ್ತಾ

197 (ततः प्रविशति अश्वत्थामा)

198 **अश्वत्थामा**—(पूर्वोक्तमेव पठित्वा) भो भोः! समर-संरम्भोभय-बल-जलधि-सङ्गम-समय-समुत्थित-शस्त्र-नक्र-कृत्त-विग्रहाः स्तोकावशेष-श्वासानुबद्ध-मन्द-प्राणाः समरश्लाघिनो राजानः! शृण्वन्तु शृण्वन्तु भवन्तः।

199 **छलबलदलितोरुः कौरवेन्द्रो न चाहं**
शिथिलविफलशस्त्रः सूतपुत्रो न चाहम्।

---

stout and long as the magnificent sacrificial posts of gold; as he is (now) violently drawing his dreadful bow, he is like the blazing Meru, with a rain-bow resting on its peak. [56]

197 *(Then enters As'vatthāmā)*

198 As'VATTHĀMĀ—*(Having repeated the earlier verse no. 55)* Oh, ye kings, — whose bodies are mutilated by those crocodiles, viz., the weapons, arisen at the time of the confluence of the two oceans, viz., the (opposing) forces clashing in fight,—whose sinking lives are clinging to the very feeble remains of breath, and who are renown in battle! Listen; all of you listen.

199 It was the Kaurava king that had his thighs

ಇವನು ಬೆಂಕಿಯಿಂದ ಕೂಡಿದ ಮತ್ತು ಶಿಖರದಲ್ಲಿ ಅಂಟಿಕೊಂಡ ಕಾಮನ ಬಿಲ್ಲುಳ್ಳ ಮೇರುವಿನಂತೆ (ಕಾಣಿಸುತ್ತಿದ್ದಾನೆ). [೫೬]

197 (ಬಳಿಕ ಅಶ್ವತ್ಥಾಮ ಪ್ರವೇಶಿಸುತ್ತಾನೆ)

198 **ಅಶ್ವತ್ಥಾಮ**—(ಹಿಂದೆ ಹೇಳಿದ್ದ ೫೫ನೇ ಶ್ಲೋಕವನ್ನೇ ಹೇಳಿ) ಭೋ ಭೋಃ! ಯುದ್ಧದ ಸಡಗರವೆಂಬ ಎರಡು ಸೈನ್ಯಸಾಗರಗಳು ಸಂಗಮವಾಗುವ ಸಮಯದಲ್ಲಿ ಮೇಲೆದ್ದ ಆಯುಧಗಳೆಂಬ ಮೊಸಳೆಗಳಿಂದ ಕತ್ತರಿಸಲ್ಪಟ್ಟ ಶರೀರವುಳ್ಳ, ಸ್ವಲ್ಪವೇ ಉಳಿದಿರುವ ಶ್ವಾಸಕ್ಕೆ ಅಂಟಿಕೊಂಡು ಮಂದವಾದ ಪ್ರಾಣಗಳುಳ್ಳ, ಮತ್ತು ಯುದ್ಧವನ್ನು ಶ್ಲಾಘಿಸುವ ರಾಜರೇ! ಕೇಳಿ, ನೀವು ಕೇಳಿ.

199 ಮೋಸದ ಬಲದಿಂದ ಮುರಿಯಲ್ಪಟ್ಟ ತೊಡೆಯುಳ್ಳವನು

इह तु विजयभूमौ द्रष्टुमद्योद्यतास्त्रः
सरभसमहमेको द्रोणपुत्रः स्थितोऽस्मि ॥५७॥

200 किमनया ममाप्यप्रतिलाभविजयश्लाघया समरश्रिया ! (परिक्रम्य) मा तावत् । मयि गुरुनिवपनव्यग्रे वञ्चितः किल कुरुकुलतिलकभूतः कुरुराजः । क एतच्छ्रद्धास्यति ! कुतः,

201 उद्यत्प्राञ्जलयो रथद्विपगताश्वापद्वितीयैः करैः
यस्यैकादशवाहिनीनृपतयस्तिष्ठन्ति वाक्योन्मुखाः ।

---

shattered by the power of fraud, not I; it was the charioteer's son (Karṇa) who held a weapon that grew slack and failed, not I; but, to-day, I, Droṇa's son, stand alone here in this yard of victory, with my weapon raised up violently to look (for some warrior to fight with). [57]

200 What is the use even to me of this glory of battle in which the praise of victory is profit-less ? *(Stepping round)* No, not so, It is reported that when I was engaged in the funeral oblation to my father, the Kuru king, the ornament of the Kuru race, was cheated. Who will believe this ? For,—

201 Clearly vanquished only by destiny is even that

ಕೌರವೇಂದ್ರ, ನಾನಲ್ಲ. ಶಿಥಿಲವೂ ವಿಫಲವೂ ಆದ ಶಸ್ತ್ರ ಹೊಂದಿದ್ದವನು ಸೂತ ಪುತ್ರ ಕರ್ಣ, ನಾನಲ್ಲ. ಈ ವಿಜಯಭೂಮಿಯಲ್ಲಿ ರಭಸದಿಂದ ಅಸ್ತ್ರವನ್ನು ಮೇಲಕ್ಕೆತ್ತಿ ಹಿಡಿದುಕೊಂಡು (ಪ್ರತಿಸ್ಪರ್ಧಿಯನ್ನು) ನೋಡುವುದಕ್ಕಾಗಿ ದ್ರೋಣ ಪುತ್ರನಾದ ನಾನೊಬ್ಬನೇ ನಿಂತಿದ್ದೇನೆ. [೫೭]

200 ಲಾಭವೇನೂ ಇಲ್ಲದ ವಿಜಯಶ್ಲಾಘನೆಯ ಈ ಯುದ್ಧ ಸಂಪತ್ತಿಯಿಂದ ನನಗೆ ತಾನೇ ಏನು ಪ್ರಯೋಜನ? (ಸುತ್ತಾಡಿ) ಹಾಗಾಗದು. ನಾನು ನನ್ನ ತಂದೆಗೆ ಜಲಾಂಜಲಿ ನೀಡುವುದರಲ್ಲಿ ತೊಡಗಿರಲು, ಕುರುಕುಲ ತಿಲಕಪ್ರಾಯನಾದ ಕುರುರಾಜನು ವಂಚಿತನಾದನಂತೆ! ಇದನ್ನು ಯಾರು ತಾನೇ ನಂಬುತ್ತಾರೆ? ಯಾಕೆಂದರೆ—

201 ಹನ್ನೊಂದು (ಅಕ್ಷೌಹಿಣೀ) ಸೈನ್ಯಗಳ (ನಾಯಕರಾದ) ರಾಜರು,

भीष्मो रामशरावलीढकवचस्तातश्च योद्धा रणे
व्यक्तं निर्जित एव सोऽप्यतिरथः कालेन दुर्योधनः ॥

202 तत् क नु खलु गतो गान्धारीपुत्रः ? (परिक्रम्यावलोक्य) अये, अयम् अभिहत-गज-तुरग-नर-रथ-प्राकार-मध्यगतः समरपयोधिपारगः कुरुराजः ! य एषः,

203 मौलीनिपातचलकेशमयूखजालैः
गात्रैर्गदानिपतनक्षतशोणितार्द्रैः ।

Duryodhana, waiting for whose command sovereigns of eleven armies mounted on chariots and elephants remained with folded hands raised up even as they held arrows, and in whose battle Bhiṣma whose armour was licked by the arrows of Paras'urāma was a warrior, as was my father also. [58]

202 Now, where has Gāndhārī's son gone, I wonder. *(Stepping about and looking)* Oh, here is the Kuru king in the midst of the rampart of the slain elephants, horses, men and chariots, having reached the shore of the ocean of battle. Here, he,

203 With the net-works of his ray-like locks dishevelled as

ರಥಗಳಲ್ಲೂ ಆನೆಗಳಮೇಲೂ ಇದ್ದುಕೊಂಡೇ ಧನುಸ್ಸು ಹಿಡಿದ ಕೈಗಳನ್ನೇ ಮೇಲಕ್ಕೆತ್ತಿ ಅಂಜಲಿಬದ್ಧರಾಗಿ, ಯಾವನ ಅಪ್ಪಣೆಯನ್ನೇ ಇದಿರು ನೋಡುತ್ತಾ ಇರುತ್ತಿದ್ದರೋ, ಪರಶುರಾಮನ ಬಾಣಗಳಿಂದ ವಿಧ್ವಸ್ತವಾದ ಕವಚವುಳ್ಳ ಭೀಷ್ಮನೂ ನನ್ನ ತಂದೆಯೂ ಯಾವನ ಪಕ್ಷಹಿಡಿದು ರಣಭೂಮಿಯಲ್ಲಿ ಯುದ್ಧ ಮಾಡಿದರೋ, ಅಂತಹ ಅತಿರಥನಾದ ದುರ್ಯೋಧನನೂ ಸ್ಪಷ್ಟವಾಗಿ ಯಮನಿಂದಲೇ ಪರಾಜಿತನಾಗಿಬಿಟ್ಟಿದ್ದಾನೆ. [೫೮]

202 ಆ ಗಾಂಧಾರೀಪುತ್ರನಾದರೂ ಎಲ್ಲಿ? (ಸುತ್ತಾಡಿ, ನೋಡಿ) ಓ, ಇದೋ, ಸಮರಸಾಗರದ ದಡವನ್ನು ಸೇರಿ, ಕೊಲ್ಲಲ್ಪಟ್ಟ ಆನೆ ಕುದುರೆ ಜನರು ರಥಗಳೆಂಬ ಪ್ರಾಕಾರದ ಮಧ್ಯದಲ್ಲಿದ್ದಾನೆ ಕುರುರಾಜ! ಇವನೋ—

203 ಕಿರೀಟವು ಕೆಳಗೆ ಬಿದ್ದುದರಿಂದ ಚಲಿಸುವ ತಲೆಗೂದಲುಗಳೆಂಬ

†भात्यस्तमस्तकशिलातलसन्निविष्टः † यात्य०
सन्ध्यावगाढ इव पश्चिमकालसूर्यः ॥५९॥

204 (उपसृत्य) भोः कुरुराज ! किमिदम् ?

205 राजा— गुरुपुत्र ! फलमपरितोषस्य ।

206 अश्वत्थामा—भोः कुरुराज ! सत्कारमूलमावर्जयिष्यामि ।

207 राजा—किं भवान् करिष्यति ?

208 अश्वत्थामा—श्रूयताम् ।

---

the crown has fallen down, with limbs drenched with blood from wounds caused by mace-blows, appears like the setting sun seated on the surface of a rock on the peak of the setting Mount and plunged in twilight. [59]

204 *(Going near)* O king of the Kurus, what is this?

205 THE KING—O son of my preceptor, it is the fruit of discontentment.

206 AS'VATTHĀMĀ-O king of the Kurus, I will pull out the very root of honour.

207 THE KING—What do you propose to do?

208 AS'VATTHĀMĀ—Listen.

ಕಿರಣಜಾಲಗಳಿಂದಲೂ, ಗದೆಯ ಏಟುಗಳಿಂದಾದ ಗಾಯದ ರಕ್ತದಿಂದ ತೊಯ್ದ ಅವಯವಗಳಿಂದಲೂ, ಅಸ್ತಾಚಲದ ಶಿಖರದ ಶಿಲಾತಲದಲ್ಲಿ ತಂಗಿ ಸಂಧ್ಯೆಯೊಳಗೆ ಮುಳುಗಿದ ಸಾಯಂಕಾಲದ ಸೂರ್ಯನಂತೆ ಕಾಣಿಸುತ್ತಿದ್ದಾನೆ.

204 (ಹತ್ತಿರ ಹೋಗಿ) ಕುರುರಾಜನೇ, ಇದೇನು?

205 ರಾಜ—ಗುರುಪುತ್ರ, (ಇದು) ಅಸಂತೋಷದ ಫಲ.

206 ಅಶ್ವತ್ಥಾಮ—ಕುರುರಾಜನೇ, ಸತ್ಕಾರದ ಮೂಲವನ್ನೇ ತಂದೊಪ್ಪಿಸುತ್ತೇನೆ.

207 ರಾಜ—ಏನು ಮಾಡುವಿ?

208 ಅಶ್ವತ್ಥಾಮ—ಕೇಳು.

209 युद्धोद्यतं गरुडपृष्ठनिविष्टदेहं
*स्पष्टाष्टभीमभुजमुद्यतशार्ङ्गचक्रम् । * अष्टार्ध०
कृष्णं सपाण्डुतनयं युधि शस्त्रजालैः
सङ्कीर्णलेख्यमिव चित्रपटं क्षिपामि ॥६०॥

210 राजा— मा मा भवानेवम् ।

211 गतं धात्र्युत्सङ्गं सकलमभिषिक्तं नृपकुलं
गतः कर्णः स्वर्गं निपतिततनुः शन्तनुसुतः ।

---

209 With net-works of weapons I will hurl down Kṛṣṇa, together with the sons of Pāṇḍu, in a fight, as if he were a picture-board with overlapping paintings ; — Kṛṣṇa, as he gets engaged in the fight, riding on Garuda's back, his eight dreadful arms made manifest, and his Disc and the S'ārṅga bow raised aloft. [60]

210 THE KING—No, say not so.

211 The whole host of consecrated kings is lying on the lap of (mother) Earth ; Karṇa has gone to heaven ; S'antanu's son (Bhiṣma) is dead; my hundred brothers have

---

209 ಗರುಡನ ಹೆಗಲಿನಮೇಲೆ (ದೇಹವಿಟ್ಟು) ಕುಳಿತು ತನ್ನ ಭೀಕರವಾದ ಎಂಟು ಬಾಹುಗಳನ್ನೂ ಸ್ಪಷ್ಟವಾಗಿ ತೋರ್ಪಡಿಸಿಕೊಂಡು, ಶಾರ್ಙ್ಗವನ್ನೂ ಚಕ್ರವನ್ನೂ ಎತ್ತಿ ಹಿಡಿದು ಯುದ್ಧಕ್ಕೆ ತೊಡಗಿದ ಕೃಷ್ಣನನ್ನು, ಪಾಂಡುತನಯರ ಸಮೇತ, ಯುದ್ಧದಲ್ಲಿ (ನನ್ನ) ಶಸ್ತ್ರಜಾಲಗಳಿಂದ ಎತ್ತಿಹಾಕಿಬಿಡುತ್ತೇನೆ; ಒಂದರೊಡನೊಂದು ಬೆರೆತುಹೋದ ಚಿತ್ರಗಳುಳ್ಳ ಚಿತ್ರಪಟವನ್ನು ಹೇಗೋ ಹಾಗೆ. [೬೦]

210 ರಾಜ— ಬೇಡ, ಹಾಗೆ ಮಾಡಬೇಡ.

211 ಪಟ್ಟಾಭಿಷಿಕ್ತರಾಗಿದ್ದ ಎಲ್ಲ ರಾಜರ ಸಮೂಹವೂ ಭೂಮಿಯ ಮಡಿಲನ್ನು ಸೇರಿಬಿಟ್ಟಿದೆ. ಕರ್ಣನು ಸ್ವರ್ಗಕ್ಕೆ ತೆರಳಿಬಿಟ್ಟ. (ಶಂತನುವಿನ ಮಗ) ಭೀಷ್ಮನೂ ದೇಹ ನೀಗಿಬಿಟ್ಟಿದ್ದಾನೆ. ನನ್ನ ನೂರು ಸೋದರರೂ

गतं भ्रातॄणां मे शतमभिमुखं संयुगमुखे
वयं चैवंभूता गुरुसुत ! धनुर्मुञ्चतु भवान् ॥६१॥

212 अश्वत्थामा— भोः कुरुराज !

213 संयुगे पाण्डुपुत्रेण गदापातकचग्रहे ।
सममूरुद्वयेनाद्य दर्पोऽपि भवतो हृतः ॥६२॥

214 राजा — मा मैवम् । मानशरीरा राजानः । मानार्थमेव मया निग्रहो गृहीतः । पश्य गुरुपुत्र !

---

passed away; and facing the foe in the van of battle, I too have come to this plight. O preceptor's son! you keep aside the bow. [61]

212 AS'VATTHĀMĀ—O king of the Kurus!

213 In the fight to-day, when the mace was flung and your locks were seized, was your spirit also taken away along with the thighs by Pāṇḍu's son? [62]

214 THE KING — No, not so. Self-respect forms the very person of kings. Only for the sake of self-respect, war was undertaken by me. Look, preceptor's son.—

ಹೋಗಿ ಬಿಟ್ಟರು. ಯುದ್ಧ ಭೂಮಿಯಲ್ಲಿ ಅಭಿಮುಖನಾಗಿ (ಯುದ್ಧ ಮಾಡುತ್ತಾ) ನಾನೂ ಈ ಸ್ಥಿತಿಗೆ ಬಂದಿದ್ದೇನೆ. ಗುರುಪುತ್ರನೇ, ನೀನು ಧನುಸ್ಸನ್ನು ತ್ಯಜಿಸಿಬಿಡು. [೬೧]

212 ಅಶ್ವತ್ಥಾಮ—ಕುರುರಾಜನೇ,

213 ಯುದ್ಧದಲ್ಲಿ ಇಂದು ಗದೆಯಿಂದ ಹೊಡೆದು (ನಿನ್ನ) ಕೂದಲನ್ನು ಹಿಡಿದ ಸಮಯದಲ್ಲಿ, ಎರಡು ತೊಡೆಗಳ ಜತೆಯಲ್ಲೇ ನಿನ್ನ ದರ್ಪವೂ ಕೂಡ (ಪಾಂಡು ಪುತ್ರನಾದ) ಭೀಮನಿಂದ ಅಪಹೃತವಾಗಿಬಿಟ್ಟಿತೆ? [೬೨]

214 ರಾಜ—ಬೇಡ, ಹಾಗನ್ನಬೇಡ. ರಾಜರು ಮಾನವನ್ನೇ ಶರೀರವಾಗಿ ಉಳ್ಳವರು. ಮಾನಕ್ಕಾಗಿಯೇ ನಿಗ್ರಹವು ನನ್ನಿಂದ ಅಂಗೀಕೃತವಾಯಿತು. ನೋಡು, ಗುರುಪುತ್ರನೇ!

215 यत्कृष्टा करनिग्रहाञ्चितकचा द्यूते तदा द्रौपदी
यद्बालोऽपि हतस्तदा रणमुखे पुत्रोऽभिमन्युः पुनः ।
अक्षव्याजजिता वनं वनमृगैर्यत्पाण्डवाः संश्रिता
† दर्पव्रतं नन्वल्पं मयि तैः कृतं विमृश भो ! †दर्पाहृतं दीक्षितैः ॥

216 अश्वत्थामा—सर्वथा कृतप्रतिज्ञोऽस्मि ।

217 भवता चात्मना चैव वीरलोकैः शपाम्यहम् ।
निशासमरमुत्पाद्य रणे धक्ष्यामि पाण्डवान् ॥६४॥

---

215 How, on that occasion during the gambling, Draupadī was dragged by (her) tresses seized and twisted by the hand; how again, on another occasion, (their) son Abhimanyu, though a boy, was slain in the van of fight; how the Pāṇḍavas, vanquished on the pretext of dice-play, dwelt in the forest together with wild beasts; consider this, sir. Is it not little that has been done to me by those (Pāṇḍavas) consecrated (for the battle-rite), in taking away my spirit? [63]

216 AS'VATTHĀMĀ—I have taken an oath by everything.

217 I conjure upon you, upon me and upon the worlds

---

215 ಅಂದು ದ್ರೌಪದಿಯನ್ನು ಅವಳ ಮುಂಗುರಳನ್ನು ಕೈಯಲ್ಲಿ ಹಿಡಿದು ದ್ಯೂತಸಭೆಗೆ ಎಳೆದು ತಂದುದೇನು; ಅಂದು ಯುದ್ಧಭೂಮಿಯಲ್ಲಿ ಅಭಿಮನ್ಯುವನ್ನು, ಅವನು ಇನ್ನೂ ಬಾಲಕನಾಗಿದ್ದರೂ, ಕೊಂದುದೇನು; ಪಗಡೆಯ ನೆಪದಿಂದ ಸೋಲಿಸಲ್ಪಟ್ಟ ಪಾಂಡವರು ವನಮೃಗಗಳೊಡನೆ ಅರಣ್ಯವನ್ನು ಸೇರಿದುದೇನು; (ಹೀಗಿರುವಾಗ) ಯುದ್ಧದಲ್ಲಿ ದೀಕ್ಷಿತರಾದ ಅವರು ನನ್ನ ದರ್ಪವನ್ನು ಇಳಿಸಿದುದು ಸ್ವಲ್ಪಮಾತ್ರವೇ ಪ್ರತಿಕ್ರಿಯೆ ಮಾಡಿದಂತಲ್ಲವೆ? ನೀನೇ ವಿಮರ್ಶಿಸು. [೬೩]

216 ಅಶ್ವತ್ಥಾಮ—ಸರ್ವಥಾ ಪ್ರತಿಜ್ಞೆ ಮಾಡಿಬಿಟ್ಟಿದ್ದೇನೆ.

217 ನಿನ್ನ ಮೇಲೆ, ನನ್ನ ಮೇಲೆ, ವೀರರೆಲ್ಲರ ಮೇಲೆ ಆಣೆಯಿಟ್ಟು

218 बलदेवः—एतद्भविष्यत्युदाहृतं गुरुपुत्रेण ।

219 अश्वत्थामा—हलायुधोऽत्रभवान् !

220 धृतराष्ट्रः—हन्त ! साक्षिमती खलु वञ्चना ।

143 हृदयस्य प्रीतिः ; हृदयप्रीतिं जनयति इति — हृदयप्रीतिजननः । उत्सुनोति (expels) दुःखशोकादीन् इति उत्सवः; नेत्रयोः उत्सवः — नेत्रोत्सवः । These two can apply both to his son (Durjaya) and the moon. Both possess these two natural qualities. कालविपर्यासात्— due to the change of time, i.e., circumstance. With वह्नित्वमागतः, cf. पुत्रस्नेहो मां दहति in paras 135 and 140

145 त्वया आस्यतां becomes त्वं आस्व in the active voice. यत्र यत्र is used here in the sense of यत्र कुत्रापि— anywhere.

163 प्रमाण (in the first and the last pādas) should not be taken to mean 'size'. It is used in the general sense of 'of the form of.' The force of the two words काञ्चनस्तम्भसमप्रमाणः and द्वारेन्द्रकीलार्धसमप्रमाणः is the contrast between Duryodhana's earlier 'resplendent and erect stature or form' and the present 'pitiable broken or fallen state.' कीलार्ध—broken bolt.

169 वीर्यं च बलं च वीर्यबले; वीर्यबलाभ्याम् उत्सिक्तं=वीर्यबलोत्सिक्तम् । संयुग एव अध्वरः ; तत्र दीक्षितम् — संयुगाध्वरदीक्षितम् । Note the repeated identification of *war* with a *sacrifice*. Compare stanza 6 *supra* and para 194 *infra.*

172 अपराङ्मुखो युधि etc. —पराक् (backward) मुखम् अस्य इति पराङ्मुखः; पराङ्मुखो न भवति इति अपराङ्मुखः । A warrior should

never turn his face away from a fight. A face to face fight has invariably a desirable benefit. See Karṇabhāra 17 — हतोऽपि लभते स्वर्गं जित्वा तु लभते यशः। उभे बहुमते लोके नास्ति निष्फलता रणे।

173 तव पादौ एव त्वत्पादमात्रं ; तत्र प्रणतः अग्रमौलिः यस्य सः — त्वत्पादमात्रप्रणताग्रमौलिः। ज्वलन्तम् अग्निम् etc. — the blazing fire referred to is the burning consciousness of having been hit down foully by Bhima, which does not affect Duryodhana's *abhimāna* at any rate.

179 नमः कृत्वा — नमस्कृत्य an upapada compound where नमः and कृ are optionally compounded. जात्यां=जन्मनि। The id a of this verse is expanded in Nāgānanda IV 20.

182 भ्रुकुटी—भ्रुवोः कुटी; curve of the eye-brow. भिन्ना — is torn. व्रणकाञ्चनाङ्गदधरौ — the two arms bear wounds which form golden armlets. भर्ता ते etc.—with this, cf. 172 *supra*.

185 Duryodhana recounts here his own achievements. वाहिनी is an army division consisting of 81 elephants, 81 chariots, 243 horses, 405 foot soldiers. Note the proportion of these four constituents 1 : 1 : 3 : 5. The last line can also be construed thus — हे मानिनि ! एवंविधानां मानं वीक्ष्य मे स्त्रियः न रुदन्ति हि। न रुदन्ति is used in the sense of रोदितुं नार्हन्ति।

191 Duryodhana's pride—(१) अभिमानतप्तहृदयः (२) अभिमुखं रणे हतः। The last pāda may be construed thus also — मम अवसाने पाण्डुपुत्रैः समं त्वया जलं देयं नाम।

192 अये शब्द इव — with this, cf. 36 *supra*. Here the sound is that of the bow of As'vatthāmā. See para 195.

193 The three compound words ending in...मूके, ...पन्ने, and .... यौधे may be taken to form locative absolutes with रणक्षेत्रे सति understood.

194 Construe — आततकार्मुकेण दुर्योधनेन सहितः यो युद्धयज्ञं (मया पूर्वं) प्रविष्टः (आसीत्) तमेव (युद्धयज्ञम् अहं) भूयः प्रविशामि,

अध्वर्युणा शून्यं वृत्तं अश्वमेधमिव । See para [169] *supra* where the term is संयुगाध्वर । अध्वर्युणा शून्यं —the *adhvaryu* is Duryodhana in the युद्धयज्ञ which is compared to an अश्वमेध here. For the performance of yajñas, four classes of priests are needed, viz. Hotṛ, Adhvaryu, Udgātṛ and Brahma. The As'vamedha is the horse-sacrifice which only kings are entitled to perform.

196 As'vatthāma's personality is described. Wide eyes are usually compared to the petals of a स्फुटितकमल (full-blown lotus). Bhāsa is fond of comparing massive and stout arms of a person to brilliant कनकयूप्s (golden sacrificial posts), Cf. [99] *supra* and Pañcarātra I 6 a. Angry As'vatthāmā is compared to the blazing Meru and his bow to the इन्द्रचाप (rain-bow) on the peak of Meru. Meru is mentioned in the Purāṇas and literary works as a gold mountain.

198 समरश्लाघिनः—(१) समरं श्लाघन्ते इति तच्छीलाः (२) समरस्य श्लाघा अस्ति येषां ते (३) समरे श्लाघिनः (लब्धप्रतिष्ठाः) ।

199 *Line 1 :* contrast between Duryodhana who had succumbed to the deceitful design of the foe and As'vatthāmā dexterous to frustrate all such things. *Line 2* : contrast between Karṇa whose weapons would fail at the hour of need and As'vatthāmā of ever effective weapons. *Allusion*—Karṇa was born to Kuntī even when she was a *kanyā* by the sun-god. So, afraid of public scandal, Kuntī threw him into a river where he was found and saved by a Sūta (charioteer) of Dhṛtarāṣṭra. The child was brought up by his wife named Rādhā. Thus Karṇa got the names Sūtaputra and Rādheya. Karṇa had learnt the art of fighting from Paras'urāma, by posing before him as a Brahmin and not revealing that he was a kṣatriya. But, on one occasion, when Paras'urāma was asleep with his head laid on Karṇa's lap, a worm made a deep rent in his lap. Karṇa bore the pain, lest Paras'urāmā's sleep be disturbed. On waking up, Paras'urāma saw that and easily made out from that extra-

ordinary fortitude of Karṇa that he must be a warrior and not at all a Brahmin and cursed him that his weapons would fail him at the hour of need. It came out true when he had to fight as a general in the Mahābhārata war. The word द्रोणपुत्र is deliberately used as a contrast to सूतपुत्र of line 2.

200 किमनया etc. shows that As'vatthāmā is aware of the uselessness of any further hostility or fight. गुरुनिवपन etc. explains the cause of his anger and spite.

201 एकादशवाहिनी etc.—Note that the armies commanded by kings on Duryodhana's side have only 11 divisions as against the 18 on the side of the Pāṇḍavas. Vide para [185]. अतिरथः — an unrivalled warrior. Cf. — अमितान् योधयेद्यस्तु संप्रोक्तोऽतिरथस्तु सः । कालेन—by destiny.

203 अस्तमस्तक is अस्ताचलमस्तक, the peak of the setting mount. पश्चिमकालः — evening, setting time.

206 सत्कारमूलमावर्जयिष्यामि is vague. Woolner translates—'I am about to abandon the root of righteousness.' Devadhar —'I will bring back to you the very root of honour.'

209 युद्धोद्यतं कृष्णं — Kṛṣṇa never fought as a warrior in the MB war. Thus his fighting seated on the Garuḍa and with his four (or eight) arms is out of question. With सङ्कीर्णलेख्यमिव etc., cf. stanza 3 b above. The three paras 207-9 appear to be interpolated.

211 शन्तनुसुतः—Bhīṣma was the youngest son of S'antanu by Gaṅgā. निपतिततनुः— निपतिता तनुः यस्य सः । Bhīṣma, the first general on Duryodhana's side, was hit down by Arjuna with the help of S'ikhaṇḍī. As he had a boon by which he could die only when he wished, he remained lying on a couch of arrows till the Sun crossed the vernal equinox and then breathed his last. Note the repeated stress on वयं च संयुगमुखे अभिमुखम् एवं भूताः । With this verse cf. stanzas 31 & 33.

[214] Note the stress on the मान of Duryodhana.

[215] Pāṇḍavas were on their part determined to take revenge on Duryodhana but had succeeded only to remove his *darpa*. This was quite inadequate to the great wrongs done by him, viz., (1) dragging Draupadī by her tresses nto the court-hall (2) slaying of (boy) Abhimanyu and (3) exiling them to live in the forests.

[217] Conjuring in this way seems to have been common n Bhāsa's times. See Pratimā IV 24. निशासमरं — fighting during nights is prohibited. But As'vatthāmā in his spiteful mood deliberately decides to break all codes governing a ight, as Bhīma had already violated them.

[222] Durjaya is declared king by As'vatthāmā here, while, according to the original account, As'vatthāman is consecrated as the next general to continue the fight. दायाद्य s that which is inherited. Here it is पितृविक्रमदायाद्य, i.e., nherited through the valour of (your) father, which indicates that Durjaya had inherited the kingdom which his ather Duryodhana had secured through his valour. The kingdom has now been regained by the Pāṇḍavas. So, As'vatthāmā proposes to reconquer it by *his* own might of rms and that Durjaya is to be the king of that kingdom. Hence भुजबलार्जिते is मद्भुजबलार्जिते । विप्रोक्तैः—with the words of a Brahmin, i.e., himself. Note that Droṇa and his son As'vatthāmā were Brahmins.

[225] With this, cf. the last moments of Das'aratha in he Pratimānāṭaka II [91-92].

[227] It is strange that the Bharatavākya here is by Baladeva and forms the last pāda of a split verse, the first hree pādas being uttered by two other persons, Dhṛtarāṣṭra nd As'vatthāmā, announcing their next course of action.

ಭಾಸನನ್ನು ಕುರಿತ ತೊಡಕಿನ ಪ್ರಶ್ನೆ

ತಿರುವಾಂಕೂರಿನ ಪಂಡಿತ ಗಣಪತಿ ಶಾಸ್ತ್ರಿಗಳು ಸನ್ ೧೯೧೨ನೆಯ ಇಸವಿಯಲ್ಲಿ ಸ್ವಪ್ನವಾಸವದತ್ತಂ ಎಂಬ ಸಂಸ್ಕೃತ ನಾಟಕವನ್ನು ಪ್ರಕಟಿಸಿ, ಅದೂ ಅದರೊಡನೆ ದೊರೆತ ಬೇರೆ ೧೨ ನಾಟಕಗಳೂ ಸೇರಿ ಒಟ್ಟು ೧೩ ನಾಟಕಗಳು ಕಾಳಿದಾಸನಿಗಿಂತ ಪ್ರಾಚೀನನಾದ ಭಾಸನಿಂದ ರಚಿತವಾದು ವೆಂದು ಸಾರಿದರು. ಅಲ್ಲಿಯವರಿಗೆ ಭಾಸನೊಬ್ಬ ಮಹಾಕವಿ; ಕಾಳಿದಾಸ, ಬಾಣ ಮೊದಲಾದ ಅನೇಕ ಕವಿಗಳು ಅವನನ್ನು ಪ್ರಶಂಸಿಸಿದ್ದಾರೆ—ಎಂಬಷ್ಟು ಮಾತ್ರ ನಮಗೆ ತಿಳಿದಿತ್ತು. ಹೀಗೆ ಭಾಸಕೃತಗಳೆನ್ನಲಾದ ಈ ೧೩ ನಾಟಕ ಗಳನ್ನು ಹೀಗೆ ವಿಂಗಡಿಸಬಹುದು—

೧) ಬೃಹತ್ಕಥೆಯ ಆಧಾರದ ಮೇಲೆ ರಚಿತವಾದವು — ೧. ಪ್ರತಿಜ್ಞಾ ಯೌಗಂಧರಾಯಣಂ ೨. ಸ್ವಪ್ನನಾಟಕಂ[1] ೩. ಅವಿಮಾರಕಂ.

೨) ರಾಮಾಯಣದ ಆಧಾರದ ಮೇಲೆ ರಚಿತವಾದವು — ೪. ಪ್ರತಿಮಾ ನಾಟಕಂ ೫. ಅಭಿಷೇಕ ನಾಟಕಂ.

೩) ಮಹಾಭಾರತದ ಆಧಾರದ ಮೇಲೆ ಬರೆದವು — ೬. ಮಧ್ಯಮ ವ್ಯಾಯೋಗಃ ೭. ಪಂಚರಾತ್ರಂ ೮. ದೂತವಾಕ್ಯಂ ೯. ದೂತಘಟೋತ್ಕಚಂ ೧೦. ಕರ್ಣ ಭಾರಂ ೧೧. ಊರುಭಂಗಂ.

೪) ಕೃಷ್ಣಕಥೆಯ ಆಧಾರದ ಮೇಲೆ ಬರೆದುದು—೧೨. ಬಾಲಚರಿತಂ.

೫) ಜಾನಪದ ಕಥೆಗಳ ಆಧಾರದ ಮೇಲೆ ಬರೆದುದು—೧೩. ಚಾರುದತ್ತಂ

ಈ ನಾಟಕಗಳ ಕರ್ತೃ ಯಾರೆಂಬುದು ಅವುಗಳೊಂದರಲ್ಲೂ ಉಕ್ತವಾಗಿರಲಿಲ್ಲ. ಆದ್ದರಿಂದ ಶ್ರೀ ಶಾಸ್ತ್ರಿಗಳು ಕೆಲವು ಕಾರಣಗಳನ್ನು ಮುಂದಿಟ್ಟು (೧) ಅವೆ ಲ್ಲವೂ ಏಕಕರ್ತೃಕಗಳೆಂದೂ (೨) ಆ ಕರ್ತೃವು ಕಾಳಿದಾಸನಿಗಿಂತ ಪ್ರಾಚೀನ ನಾಗಿ ಅವನ ಪ್ರಶಂಸೆಗೆ ಪಾತ್ರನಾಗಿದ್ದ ಭಾಸನೇ ಎಂದೂ ತಮ್ಮ ಅಭಿಪ್ರಾಯ ವನ್ನು ಪ್ರಕಟಿಸಿದರು.

೧. ಈ ಹದಿಮೂರು ನಾಟಕಗಳೂ ಏಕಕರ್ತೃಕ — ಈ ಎಲ್ಲ ನಾಟಕ ಗಳಲ್ಲೂ ಬಹುಮುಖವಾದ ಸಾಮ್ಯಗಳು ಕಂಡುಬರುತ್ತವೆ. ಎಲ್ಲವೂ 'ನಾಂದ್ಯಂತೇ ತತಃ ಪ್ರವಿಶತಿ ಸೂತ್ರಧಾರಃ' ಎಂದು ಆರಂಭವಾಗುತ್ತವೆ.

---

[1] ಇದನ್ನೇ ಗಣಪತಿ ಶಾಸ್ತ್ರಿಗಳು ಸ್ವಪ್ನವಾಸವದತ್ತಂ ಎಂಬ ಹೆಸರಿನಿಂದ ಮೊದಲು ಪ್ರಕಟಿಸಿದುದು.

ಆಮೇಲೆ ಸೂತ್ರಧಾರನು ಪ್ರಾರ್ಥನಾಶ್ಲೋಕ (ನಾಂದೀ?) ಹೇಳಿ ಪ್ರಸ್ತಾವನೆ ಆರಂಭಿಸುತ್ತಾನೆ. ಕಾಳಿದಾಸಾದಿ ಕವಿಗಳ ನಾಟಕಗಳಲ್ಲಿ ಹೀಗಿಲ್ಲ. ಮೊದಲು ನಾಂದೀ ಶ್ಲೋಕವೂ ಆಮೇಲೆ 'ತತಃ ಪ್ರವಿಶತಿ ಸೂತ್ರಧಾರಃ' ಎಂಬ ರಂಗ ಸೂಚನೆಯೂ ಬರುತ್ತದೆ. ಪ್ರಸ್ತಾವನೆಗಳಲ್ಲಿ ನಾಟಕದ ಹೆಸರು, ಕವಿ ಮತ್ತು ಅವನ ಆಶ್ರಯದಾತನ ಹೆಸರು ಇತ್ಯಾದಿಗಳನ್ನು ಹೇಳುವುದು ಸಂಪ್ರದಾಯ. ಆದರೆ ಈ ನಾಟಕಗಳಲ್ಲಿ ಇವೊಂದೂ ಉಕ್ತವಾಗಿಲ್ಲ. 'ಪ್ರಸ್ತಾವನೆ' ಎಂಬ ಹೆಸರಿಗೆ ಬದಲಾಗಿ 'ಸ್ಥಾಪನೆ' ಎಂಬ ಹೆಸರನ್ನು ಈ ಎಲ್ಲ ನಾಟಕಗಳಲ್ಲೂ ಬಳಸಲಾಗಿದೆ. ಈ ನಾಟಕಗಳ ಭರತವಾಕ್ಯಗಳು ಸ್ವಲ್ಪ ಹೆಚ್ಚು ಕಡಿಮೆ ಒಂದೇ. ಭಾಷೆ ಮತ್ತು ಶೈಲಿ ಈ ಎಲ್ಲ ನಾಟಕಗಳಲ್ಲೂ ಒಂದೇ ರೀತಿ ಇವೆ. 'ಪತಾಕಾಸ್ಥಾನ'ವೂ ನಾಂದೀ ಶ್ಲೋಕದಲ್ಲಿ ಮುದ್ರಾಲಂಕಾರವೂ ಈ ನಾಟಕಗಳಲ್ಲಿ ಬಹುತರವಾಗಿ ಪ್ರಯೋಗಿಸಲ್ಪಟ್ಟವೆ. ಒಂದೇ ಹೆಸರಿನ ನೀಚಪಾತ್ರಗಳೂ, ಒಂದೇ ಬಗೆಯ ಭಾವಗಳೂ ಈ ನಾಟಕಗಳಲ್ಲಿ ಪುನಃ ಪುನಃ ಬಳಸಲ್ಪಟ್ಟವೆಯಲ್ಲದೆ, ಒಂದು ನಾಟಕದಲ್ಲಿ ಬಂದ ವಾಕ್ಯ ಅಥವಾ ಪದಸಮೂಹ ಮತ್ತು ಶ್ಲೋಕ ಅಥವಾ ಶ್ಲೋಕಭಾಗಗಳು ಉಳಿದ ನಾಟಕಗಳಲ್ಲೂ ಪದೇ ಪದೇ ಪ್ರಯೋಗಿಸಲ್ಪಟ್ಟವೆ. ಈ ನಾಟಕಗಳಲ್ಲಿ ಬರುವ ಕೆಲವು ಸನ್ನಿವೇಶಗಳು ಭರತನ ನಾಟ್ಯಶಾಸ್ತ್ರನಿಯಮಗಳಿಗನುಗುಣವಾಗಿಲ್ಲ. ಮರಣ ಮತ್ತು ಯುದ್ಧಗಳೂ ನೀರನ್ನು ತರಿಸಿ ಆಚಮನಾದಿ ಮಾಡುವುದೂ ರಂಗಸ್ಥಲದ ಮೇಲೆಯೇ ಪ್ರದರ್ಶಿತವಾಗುತ್ತವೆ. ಎಷ್ಟೋಕಡೆ ರಂಗಸೂಚನೆಗಳು ಸಾಕಷ್ಟು ಇರುವುದೇ ಇಲ್ಲ. ತುಂಬ ತ್ವರೆಯನ್ನು ಸೂಚಿಸುವಂತಹ 'ನಿಷ್ಕ್ರಮ್ಯ, ಪ್ರವಿಶ್ಯ' ಮುಂತಾದ ರಂಗಸೂಚನೆ ಪ್ರಾಯಃ ಈ ಎಲ್ಲ ನಾಟಕಗಳಲ್ಲೂ ವಿಶೇಷವಾಗಿದೆ. ನಾಟಕದ ಹೆಸರು ಆಯಾ ನಾಟಕದ ಸಮಾಪ್ತಿವಾಕ್ಯದಲ್ಲಿ ಮಾತ್ರ ಬರುತ್ತದೆ.

ಇಷ್ಟು ಬಗೆಯ ಸಾಮ್ಯಗಳು ಈ ಹದಿಮೂರು ನಾಟಕಗಳಲ್ಲೂ ಇರುವುದರಿಂದ ಈ ಎಲ್ಲ ನಾಟಕಗಳೂ ಒಬ್ಬ ಕವಿಯಿಂದಲೇ ರಚಿತವಾದುವೆಂಬುದು ಯಾರಿಗೇ ಆಗಲಿ ತೋರುವುದು ಸಹಜ.

೨. ಭಾಸನೇ ಈ ಹದಿಮೂರು ನಾಟಕಗಳನ್ನೂ ರಚಿಸಿದವನು — ಈ ಎಲ್ಲ ನಾಟಕಗಳೂ ಏಕಕರ್ತೃಕಗಳೆಂದಮೇಲೆ ಇವುಗಳಲ್ಲಿ ಯಾವುದಾದರೂ ಒಂದನ್ನು ರಚಿಸಿದ ಕವಿ ಇಂತಹವನೆಂಬುದು ಇತ್ಯರ್ಥವಾದರೆ, ಅವನೇ ಮಿಕ್ಕ

ನಾಟಕಗಳನ್ನೂ ಬರೆದವನೆಂದು ಹೇಳಿದಂತೆಯೇ. ಆದ್ದರಿಂದ, ರಾಜಶೇಖರನು (ಸುಮಾರು ೧೦ ನೇ ಶತಮಾನ) ಸೂಕ್ತಿಮುಕ್ತಾವಳಿಯಲ್ಲಿ ಭಾಸ ಮತ್ತು ಅವನ ಕೃತಿಯಾದ ಸ್ವಪ್ನವಾಸವದತ್ತ ಈ ಎರಡು ಹೆಸರುಗಳನ್ನೂ ಒಟ್ಟಿಗೇ ಪ್ರಯೋಗಮಾಡಿರುವ ಈ ಶ್ಲೋಕದಿಂದ ತುಂಬ ಉಪಕಾರವಾಗುತ್ತದೆ.

ಭಾಸನಾಟಕಚಕ್ರೇಽಪಿ ಚ್ಛೇಕೈಃ ಕ್ಷಿಪ್ತೇ ಪರೀಕ್ಷಿತುಂ ।
ಸ್ವಪ್ನವಾಸವದತ್ತಸ್ಯ ದಾಹಕೋಽಭೂನ್ನ ಪಾವಕಃ ॥

ಸಂಸ್ಕೃತ ಸಾಹಿತ್ಯದಲ್ಲಿ ಒಬ್ಬನೇ ಕವಿಯಿಂದ ರಚಿತವಾದ ನಾಟಕಚಕ್ರವೆಂದರೆ ಈ ಹದಿಮೂರು ನಾಟಕಗಳನ್ನು ಬಿಟ್ಟರೆ ಬೇರೆ ಇಲ್ಲ. ಅಂತಹ ನಾಟಕ ಚಕ್ರದಲ್ಲೇ ಸೇರಿರುವುದಾಗಿ ಹೇಳಿರುವ ಸ್ವಪ್ನವಾಸವದತ್ತವೂ ಈ ೧೩ ರಲ್ಲಿ ಒಂದು. ಆದ್ದರಿಂದ ಅದರ ಕರ್ತೃ ಭಾಸನೇ ಎಂದು ಧಾರಾಳವಾಗಿ ಹೇಳಬಹುದಲ್ಲದೆ, ಇದೇ ಆಧಾರದ ಮೇಲೆ, ಏಕಕರ್ತೃಕವೆಂದು ಸಿದ್ಧವಾಗಿರುವ ಈ ೧೩ ನಾಟಕಗಳನ್ನು ರಚಿಸಿದವನೂ ಭಾಸನೇ ಎಂದೂ ತೀರ್ಮಾನಿಸಬಹುದು. ಇದಲ್ಲದೆ, ಬಾಣಮಹಾಕವಿಯು (ಕ್ರಿ.ಶ. ೬೨೦) ಹರ್ಷಚರಿತೆಯಲ್ಲಿ ಭಾಸನ ನಾಟಕಗಳ ಸ್ಥೂಲಸ್ವರೂಪವನ್ನು ಒಂದು ಶ್ಲೋಕದಲ್ಲಿ ಹೇಳಿದ್ದಾನೆ.

[2]ಸೂತ್ರಧಾರಕೃತಾರಂಭೈರ್ನಾಟಕೈರ್ಬಹುಭೂಮಿಕೈಃ ।
ಸಪತಾಕೈರ್ಯಶೋ ಲೇಭೇ ಭಾಸೋ ದೇವಕುಲೈರಿವ ॥

ಈ ಶ್ಲೋಕದಲ್ಲಿ ಹೇಳಿರುವ ಮೂರು ಲಕ್ಷಣಗಳೂ ಈ ೧೩ ನಾಟಕಗಳಲ್ಲಿ ಪರಿಪೂರ್ಣವಾಗಿವೆ. ಈ ಕಾರಣದಿಂದಲೂ ಇವು ಭಾಸನಿಂದಲೇ ರಚಿತವಾದುವು.

ಈಗ ಈ ಭಾಸ ಯಾರು? ಕಾಳಿದಾಸನು ತನ್ನ ಮಾಲವಿಕಾಗ್ನಿಮಿತ್ರದಲ್ಲಿ ಪ್ರಶಂಸಿಸಿರುವ (ಅವನಿಗಿಂತ) ಪ್ರಾಚೀನನಾದ ಕವಿಯೇ? ಅಥವಾ ಅರ್ವಾಚೀನನೇ? — ಎಂಬ ಪ್ರಶ್ನೆ ಏಳುತ್ತದೆ. ಈ ನಾಟಕಗಳಲ್ಲಿ ಬರುವ ಅಪಾಣಿನೀಯ ಪ್ರಯೋಗಗಳನ್ನೂ ಭರತನ ನಾಟ್ಯಶಾಸ್ತ್ರನಿಯಮಗಳು ಅನ್ವಯಿಸದ ಸನ್ನಿವೇಶಗಳನ್ನೂ ಗಮನಿಸಿದರೆ ಭಾಸನು ಪಾಣಿನಿ, ಭರತ

---

[2] ಸೂತ್ರಧಾರನಿಂದಲೇ ಪ್ರಾರಂಭಿಸಲ್ಪಟ್ಟು ಬಹುಭೂಮಿಕೆಗಳಿಂದಲೂ ಪತಾಕಾಸ್ಥಾನಗಳಿಂದಲೂ ಕೂಡಿರುವ ನಾಟಕಗಳ ಮೂಲಕ ಭಾಸನು ಸೂತ್ರಧಾರನಾದ ಶಿಲ್ಪಿಯಿಂದ ಪ್ರಾರಂಭಿಸಲ್ಪಟ್ಟು ಅನೇಕ ಭೂಮಿಕೆಗಳಿಂದಲೂ ಧ್ವಜಗಳಿಂದಲೂ ಕೂಡಿದ ದೇವಾಲಯಗಳಂತೆ, (ಶಾಶ್ವತವಾದ) ಕೀರ್ತಿಯನ್ನು ಗಳಿಸಿದನು.

ಇವರಿಗಿಂತ ಪ್ರಾಚೀನನಾದವನೇ ಇರಬೇಕು. ಭಾಸನಲ್ಲಿ ವ್ಯಾಸ ವಾಲ್ಮೀಕಿಗಳು ಪ್ರಯೋಗಿಸಿರುವಂತಹ ಆರ್ಷಶಬ್ದಪ್ರಯೋಗಗಳು ಹೆಚ್ಚು; ಶ್ಲೋಕಗಳಲ್ಲಿ ಪಾದಪೂರಣಗಳಾದ ಚ, ತು, ಹಿ ಅಲ್ಲಲ್ಲೇ ಇವೆ; ಅನುಷ್ಟುಪ್ ಶ್ಲೋಕ ವಿಶೇಷವಾಗಿ ಬಳಸಲ್ಪಟ್ಟದೆ; ಇತ್ತೀಚಿನ ಕಾವ್ಯಗಳಂತೆ ಅಲಂಕಾರಗಳನ್ನು ಅಧಿಕವಾಗಿ ಬಳಸಿಲ್ಲ;— ಈ ಅಂಶಗಳನ್ನು ನೋಡಿದರೆ ಈ ಕವಿ ವ್ಯಾಸ ವಾಲ್ಮೀಕಿಗಳ ಸಮಕಾಲೀನನಲ್ಲದಿದ್ದರೂ ಅವರಿಗಿಂತ ತುಂಬ ದೂರದವನಲ್ಲ ವೆಂದು ಹೇಳಬೇಕಾಗುತ್ತದೆ. ಜೋನರಾಜನು ಜಯಾಂಕನ (೧೨ ನೇ ಶತ ಮಾನ) ಪೃಥ್ವೀರಾಜವಿಜಯದ ಒಂದು ಶ್ಲೋಕದ ವ್ಯಾಖ್ಯಾನಮಾಡುತ್ತಾ 'ಸೋಗ್ನಿರಪಿ **ಭಾಸಮುನೇಃ** ಕಾವ್ಯಂ........' ಎಂದು ಹೇಳಿ ಭಾಸನನ್ನು ಮುನಿ ಎಂದಿರುವುದು ಪ್ರಾಯಃ ಭಾಸನ ಪ್ರಾಚೀನತೆಗೆ ಉಪಷ್ಟಂಭಕವಾಗಿದೆ ಯೆನ್ನಬಹುದು. ಈ ೧೩ ನಾಟಕಗಳಲ್ಲಿ ಬರುವ ಭಾವಗಳೂ ಸನ್ನಿವೇಶಗಳೂ ಕಾಳಿದಾಸ, ಅಶ್ವಘೋಷ, ಶೂದ್ರಕ, ವಿಶಾಖದತ್ತ ಮುಂತಾದವರ ಕೃತಿಗಳಲ್ಲಿ ರೂಪಾಂತರಗೊಂಡು ಕಾಣಬರುತ್ತವಾದ್ದರಿಂದ ಈ ನಾಟಕಗಳನ್ನು ರಚಿಸಿದ ಭಾಸನು ಕಾಳಿದಾಸಾದಿಗಳಿಗಿಂತ ಪ್ರಾಚೀನನಾದವನೇ ಇರಬೇಕು.

೩. ಈ ನಾಟಕಚಕ್ರ ರಚಿಸಿದವನು ಭಾಸನೆ, ಅಲ್ಲವೆ ಎಂಬ ವಿವಾದ — ಈ ಹದಿಮೂರು ನಾಟಕಗಳೂ ಏಕಕರ್ತೃಕ ಮತ್ತು ಈ ನಾಟಕಗಳನ್ನು ಬರೆದವನು 'ಭಾಸ'ನೇ ಎಂಬ ಈ ಎರಡು ಅಭಿಪ್ರಾಯಗಳನ್ನೂ ಪಂಡಿತ ಗಣಪತಿ ಶಾಸ್ತ್ರಿಗಳು ಪ್ರಕಟಿಸಿದ ಮೇಲೆ, ವಿದ್ವಾಂಸರು ಈ ಬಗ್ಗೆ ವಿಚಾರ ನಡೆಸಿ, 'ಈ ನಾಟಕಗಳು ಏಕಕರ್ತೃಕ' ಎಂಬಂಶವನ್ನು ಪ್ರಾಯಃ ಎಲ್ಲರೂ ಒಪ್ಪಿಕೊಂಡರೂ 'ಅವುಗಳನ್ನು ಬರೆದವನು ಭಾಸ' ಎಂಬ ವಿಚಾರದಲ್ಲಿ ಮಾತ್ರ ಕೆಲವರು ಶ್ರೀಶಾಸ್ತ್ರಿಗಳ ಮತವನ್ನು ಅನುಮೋದಿಸಿದರು; ಕೆಲವರು ವಿರೋಧಿಸಿದರು. ಹೀಗಾಗಿ ಇದೊಂದು ವಾದ-ವಿವಾದದಲ್ಲಿ ಪರಿಣಮಿಸಿ ಈ ಬಗ್ಗೆ ಮೂರು ವಿಧವಾದ ಅಭಿಪ್ರಾಯ ಹುಟ್ಟಿತು—

೧. ಈ ಹದಿಮೂರು ನಾಟಕಗಳೂ ಭಾಸರಚಿತವಾದವು.

೨. ಇವುಗಳಲ್ಲೊಂದೂ ಭಾಸರಚಿತವಲ್ಲ.

೩. ಇವು ಭಾಸರಚಿತ ನಾಟಕಗಳೆನ್ನಲು ಸಾಕಷ್ಟು ಆಧಾರಗಳು ಇನ್ನೂ ದೊರೆತಿಲ್ಲವಾದ್ದರಿಂದ, ಇವುಗಳನ್ನು ರಚಿಸಿದವನು ಇಂತಹವನೇ ಎಂದು ಈಗಲೇ ಹೇಳಲಾಗುವುದಿಲ್ಲ.

ಈ ನಾಟಕಗಳು ಭಾಸರಚಿತವಲ್ಲವೇ ಅಲ್ಲ, ಎಂದು ವಾದಮಾಡುವವರು ಹೇಳುವ ಕಾರಣಗಳು ಇವು.— ಬಾಣನು 'ಸೂತ್ರಧಾರಕೃತಾರಂಭೈಃ........' ಶ್ಲೋಕದಲ್ಲಿ ಹೇಳಿರುವ ಲಕ್ಷಣಗಳು ದಕ್ಷಿಣದೇಶದಲ್ಲಿ ರಚಿತವಾಗಿರುವ ಇನ್ನೂ ಅನೇಕ ನಾಟಕಗಳಲ್ಲಿ ಕಂಡುಬರುತ್ತವೆಯಾಗಿ, ಅವು ನಿರ್ಣಾಯಕವಾಗಲಾರವು. ರಾಮಚಂದ್ರಕೃತ ನಾಟ್ಯದರ್ಪಣದಲ್ಲಿ ಭಾಸನ ಸ್ವಪ್ನವಾಸವದತ್ತದಲ್ಲಿ ವತ್ಸರಾಜನು ಶೇಫಾಲಿಕಾ ಮಂಟಪದ ಶಿಲಾತಲವನ್ನು ನೋಡಿ ಹೇಳುವ

> ಪಾದಾಕ್ರಾಂತಾನಿ ಪುಷ್ಪಾಣಿ ಸೋಷ್ಮ ಚೇದಂ ಶಿಲಾತಲಂ।
> ನೂನಂ ಕಾಚಿದಿಹಾಸೀನಾ ಮಾಂ ದೃಷ್ಟ್ವಾ ಸಹಸಾ ಗತಾ॥

ಎಂಬ ಶ್ಲೋಕ ಉದಾಹೃತವಾಗಿದೆ. ಈಗ ಸಿಕ್ಕಿರುವ ನಾಟಕದಲ್ಲಿ ಶೇಫಾಲಿಕಾ ಮಂಟಪದ ಪ್ರಸ್ತಾಪವಿದೆ; ಈ ಶ್ಲೋಕವಿಲ್ಲ. ಆದ್ದರಿಂದ ಈ ಸ್ವಪ್ನವಾಸವದತ್ತ ಭಾಸಕೃತ ನಾಟಕವಲ್ಲ. ಅದು ಅನ್ಯಕೃತವಾಗಿರಬೇಕು. ಈ ಸ್ವಪ್ನವಾಸವದತ್ತ ಭಾಸಕೃತವಲ್ಲವೆಂದ ಮೇಲೆ ಉಳಿದ ನಾಟಕಗಳೂ ಭಾಸಕೃತವಲ್ಲ.

ಈ ರೀತಿ ಬಲವಾದ ಎರಡು ಪಕ್ಷಗಳಲ್ಲಿ ಸಕಾರಣವಾದ ವಾದವಿವಾದ ಏರ್ಪಟ್ಟದ್ದರಿಂದ ಮಧ್ಯಮಮಾರ್ಗಾವಲಂಬಿಗಳಾದ ವಿದ್ವಾಂಸರ ಮೂರನೆಯ ಪಕ್ಷವೊಂದು ತಲೆಯೆತ್ತಿ ಯಾವುದೊಂದು ತೀರ್ಮಾನಕ್ಕೂ ಬರಲು ಸಾಕಷ್ಟು ಆಧಾರವಿಲ್ಲವೆಂದು ಅಭಿಪ್ರಾಯಪಟ್ಟಿತು.

ಹೀಗಾಗಿ ಇಂದಿನವರೆಗೂ ವಿದ್ವಾಂಸರು ಯಾವ ನಿರ್ಧಾರಕ್ಕೂ ಬರಲಾಗದೆ ಈ ಮೂರು ಅಭಿಪ್ರಾಯಗಳೂ ಹಾಗೆಯೇ ಉಳಿದಿರುವುದರಿಂದ ವಾದವಿವಾದ ಬಗೆಹರಿಯದೆ, ಯಾವ ಸಿದ್ಧಾಂತವೂ ಆಗದೆ, ಈ ನಾಟಕಗಳ ಕರ್ತೃತ್ವವಿಚಾರ ಜಟಿಲವಾದ ಸಮಸ್ಯೆಯಾಗಿಯೇ ಉಳಿದಿದೆ.

ಭಾಸನ ಕಾಲ

ಕಾಳಿದಾಸನು ಭಾಸನನ್ನು ತನಗಿಂತ ಪ್ರಾಚೀನನೆಂದು ವಾಚ್ಯವಾಗಿಯೇ ಹೇಳಿದ್ದಾನೆ. ಬಾಣ ಅವನ ಯಶಸ್ಸನ್ನು ಪ್ರಸ್ತಾಪಿಸಿದ್ದಾನೆ. ಆದ್ದರಿಂದ ಕಾಳಿದಾಸ-ಬಾಣರಿಗಿಂತ ಭಾಸ ಹಿಂದಿನವನೆಂಬುದರಲ್ಲಿ ಸಂಶಯವಿಲ್ಲ. ಭಾಸನು ತನ್ನ ಪ್ರತಿಮಾ ಮತ್ತು ಅಭಿಷೇಕ ನಾಟಕಗಳ ವಸ್ತುವನ್ನು ವಾಲ್ಮೀಕಿ ರಾಮಾಯಣದಿಂದಲೂ ದೂತವಾಕ್ಯ ಮುಂತಾದ ಏಕಾಂಕನಾಟಕಗಳ ವಸ್ತುವನ್ನು ವ್ಯಾಸನ ಮಹಾಭಾರತದಿಂದಲೂ ತೆಗೆದುಕೊಂಡಿರುವುದರಿಂದ ಅವನು ವ್ಯಾಸ

ವಾಲ್ಮೀಕಿಗಳಿಗಿಂತ ಈಚಿನವನೆಂದು ಧಾರಾಳವಾಗಿ ಹೇಳಬಹುದು. ಇಷ್ಟು ಖಚಿತವಾದ ಎಲ್ಲೆಗಳು ಸಿಕ್ಕಿದ್ದರೂ ಭಾಸನ ಕಾಲ ನಿಷ್ಕೃಷ್ಟವಾಗಿ ತಿಳಿಯುವ ಹಾಗೆಯೇ ಇಲ್ಲ. ಕಾಳಿದಾಸನ ಕಾಲವಿನ್ನೂ ನಿಖರವಾಗಿ ತಿಳಿದಿಲ್ಲ. ಅವನು ಕ್ರಿ.ಪೂ. ೧ನೇ ಶತಮಾನದವನೆಂದು ಕೆಲವು ವಿದ್ವಾಂಸರು ಅಭಿಪ್ರಾಯಪಟ್ಟರೆ, ಕ್ರಿ.ಶ. ೬ನೇ ಶತಮಾನದವನೆಂದು ಮತ್ತೆ ಕೆಲವರು ವಾದಿಸುತ್ತಾರೆ. ವ್ಯಾಸ ವಾಲ್ಮೀಕಿಗಳ ಕಾಲವೂ ಹಾಗೆಯೇ. ವಾಲ್ಮೀಕಿಯು ಕಾಲ ಕೀತ್‌ರವರ ಅಭಿಪ್ರಾಯದಲ್ಲಿ ಕ್ರಿ.ಪೂ. ೪ ನೇ ಶತಮಾನವಾದರೆ, ಜಾಕೋಬಿಯವರ ಅಭಿಪ್ರಾಯದಲ್ಲಿ ಕ್ರಿ.ಪೂ. ೫ ನೇ ಶತಮಾನಕ್ಕಿಂತ ಹಿಂದಕ್ಕೆ ಹೋಗುತ್ತದೆ. ಬಾಣನ ಕಾಲ ಒಂದು ಮಾತ್ರ ಖಚಿತವಾಗಿ ಕ್ರಿ.ಶ. ೬ ನೆಯ ಶತಮಾನದ ಕೊನೆಯೆಂದು ತಿಳಿದಿದೆ. ಆದ್ದರಿಂದ ಭಾಸ ಕ್ರಿ.ಶ. ೬ ನೇ ಶತಮಾನಕ್ಕಿಂತ ಹಿಂದಿನವನೆಂದಂತಾಯಿತು.

ಪ್ರತಿಮಾನಾಟಕದಲ್ಲಿ ಬರುವ ಒಂದು ಪ್ರಸಂಗದಿಂದ(v46, v47) ಭಾಸನ ಕಾಲದಲ್ಲಿ ಗೋಹತ್ಯೆ ಇನ್ನೂ ನಿಂತಿರಲಿಲ್ಲವೆಂಬುದು ಸ್ಪಷ್ಟವಾಗುತ್ತದೆ. ಕ್ರಿಸ್ತ ಶಕದ ಪ್ರಾರಂಭದ ವೇಳೆಗೇ ಗೋಹತ್ಯೆ ಸಂಪೂರ್ಣವಾಗಿ ನಿಂತುಹೋಗಿತ್ತೆಂದು ಡಾ. D. R. ಭಂಡಾರ್‌ಕರ್‌ರವರು ಪ್ರಮಾಣಗಳೊಡನೆ ತೋರಿಸಿದ್ದಾರೆ. ಜನರ ಮನೋಭಾವದಲ್ಲಿ ಈ ರೀತಿಯ ಪರಿವರ್ತನೆಗೆ ಬೌದ್ಧಜೈನತತ್ವಗಳಿಂದ ಪ್ರಚೋದಿತವಾದ ವೃಷಲ ಸಂಪ್ರದಾಯವೇ ಕಾರಣವೆನ್ನಬಹುದು. ಆದ್ದರಿಂದ ಭಾಸ ಈ ಸಂಪ್ರದಾಯ ಹರಡುವುದಕ್ಕೂ ಹಿಂದೆಯೇ (ಅಂದರೆ ಕ್ರಿ.ಪೂ. ೪ ನೇ ಶತಮಾನಕ್ಕೂ ಹಿಂದೆಯೇ) ಇದ್ದಿರಬೇಕು.

ಯಜ್ಞ ಯಾಗಾದಿಗಳು ಅವಶ್ಯಕರ್ತವ್ಯಗಳೆಂಬುದು ಭಾಸನ ಮತ. ಅವಕಾಶ ದೊರೆತಾಗಲೆಲ್ಲಾ ಅವನು ಇದನ್ನು ಒತ್ತಿ ಹೇಳುತ್ತಾನೆ. ಪಂಚರಾತ್ರ ನಾಟಕದಲ್ಲಿ ದುರ್ಯೋಧನನಿಂದ ಆಚರಿಸಲ್ಪಟ್ಟ ಯಜ್ಞದ ಪ್ರಶಂಸೆ ಸುದೀರ್ಘವಾಗಿಯೇ ಇದೆ. ಕರ್ಣನಾಡುವ 'ಏತೇ ಸಕೋಶಾಃ ಪುರುಷಾಃ ಸರಾಷ್ಟ್ರಾಃ ನಷ್ಟಾಃ ಶರೀರೈಃ ಕ್ರತುಭಿರ್ಧರಂತೇ' (—ಪಂಚರಾತ್ರ i ೨೫) ಮತ್ತು 'ಶಿಕ್ಷಾ ಕ್ಷಯಂ ಗಚ್ಛತಿ ಕಾಲಪರ್ಯಯಾತ್....ಹುತಂ ಚ ದತ್ತಂ ಚ ತಥೈವ ತಿಷ್ಠತಿ' (ಕರ್ಣಭಾರ i ೨೨) ಎಂಬ ಶ್ಲೋಕಗಳಲ್ಲೂ ಯಜ್ಞಗಳ ವೈಶಿಷ್ಟ್ಯ ಕೊಂಡಾಡಲ್ಪಟ್ಟಿದೆ. 'ಯಜ್ಞಫಲ' ನಾಟಕದಲ್ಲಂತು ರಾಮಾದಿಗಳ ಜನನವು ದಶರಥನು

ಆಚರಿಸಿದ ಪುತ್ರಕಾಮೇಷ್ಟಿಯಾಗದ ಫಲ; ರಾಮನ ಅಸ್ತ್ರಸಂಪಾದನೆ ವಿಶ್ವಾಮಿತ್ರನ ಯಾಗದ ಸಂರಕ್ಷಣೆಯ ಫಲ; ರಾಮಾದಿಗಳ ವಿವಾಹ ಜನಕನು ಮಾಡಿದ ಯಜ್ಞದ ಫಲ; ಇಷ್ಟೇ ಅಲ್ಲದೆ 'ಯಜ್ಞಫಲ' ಎಂಬ ಮಾತು ನಾಟಕದ ಉದ್ದಕ್ಕೂ ಪುನಃ ಪುನಃ ಕೇಳಿ ಬರುತ್ತದೆ. ಯಜ್ಞಯಾಗಾದಿಗಳ ಮೇಲೆ ಭಾಸನಿಗಿದ್ದ ಈ ಅಪಾರ ಗೌರವ ಅವನ ಕಾಲದ ಜನರ ಮನೋಭಾವವನ್ನೇ ಪ್ರತಿಬಿಂಬಿಸುತ್ತದೆಯೆನ್ನಬಹುದಾದ್ದರಿಂದ, ಜನರು ಬೌದ್ಧಮತದ ಕಡೆ ವಾಲುವುದಕ್ಕೆ ಪೂರ್ವವರ್ತಿಯಾದ ಕಾಲದಲ್ಲಿ ಭಾಸನಿದ್ದಿರಬೇಕು.

ಕೆಲವು ವಿದ್ವಾಂಸರು ವ್ಯಾಸವಾಲ್ಮೀಕಿಗಳ ಕಾಲವನ್ನು ಇನ್ನೂ ಹಿಂದಕ್ಕೆ ಹಾಕಿ, ಭಾಸ ಕ್ರಿ.ಪೂ. ೬ ನೇ ಶತಮಾನದವನೆನ್ನುತ್ತಾರೆ. ಬಾಣನ ಶ್ಲೋಕದ ಪ್ರಮಾಣವನ್ನು ಅಂಗೀಕರಿಸದೆ ಭಾಸ ಕ್ರಿ.ಶ. ೧೧ ನೇ ಶತಮಾನದವನೆನ್ನುವವರೂ ಇದ್ದಾರೆ. ಪಾಣಿನಿಗಿಂತ ಭಾಸ ಹಿಂದಿನವನೆಂಬುದು ಗಣಪತಿಶಾಸ್ತ್ರಿಗಳ ಮತ. ಆದರೆ ಪಾಣಿನಿಯ ಕಾಲವೇ ಸರಿಯಾಗಿ ಗೊತ್ತಾಗಿಲ್ಲ. ಭಾಸನನ್ನು ಪಾಣಿನಿಗಿಂತ ಹಿಂದಿನವನೆಂದು ಎಲ್ಲರೂ ಒಪ್ಪುವುದಿಲ್ಲ; ಕಾಳಿದಾಸನಿಗಿಂತ ಸ್ವಲ್ಪ ಹಿಂದಿನವನೆನ್ನುತ್ತಾರೆ. ಹೀಗಾಗಿ ಭಾಸನ ಕಾಲವೂ ಇತ್ಯರ್ಥವಾಗದೆ ಹಾಗೆಯೇ ಉಳಿದಿದೆ.[3]

---

3 ಬೇರೆ ಬೇರೆ ವಿದ್ವಾಂಸರ ಅಭಿಪ್ರಾಯರೀತ್ಯಾ ಭಾಸನ ಕಾಲ—

ಗಣಪತಿಶಾಸ್ತ್ರಿ, ಹರಪ್ರಸಾದಶಾಸ್ತ್ರಿ ಮತ್ತು ಪುಸಲ್ಕರ್.... ಕ್ರಿ.ಪೂ. ೬ನೇ ಶತಮಾನ
ಜಾಗೀರ್‌ದಾರ್, ಕುಲಕರ್ಣಿ .... ಕ್ರಿ.ಪೂ. ೩ನೇ ಶತಮಾನ
ಜಯಸ್ವಾಲ್, ಚೌಧುರಿ, ಧ್ರುವ .... ಕ್ರಿ.ಪೂ. ೨-೧ನೇ ಶತಮಾನ
ಕೋನೋ, ಸುರಪ್, ವೆಲ್ಲರ್ .... ಕ್ರಿ.ಶ. ೨ನೇ ಶತಮಾನ
ಕೀತ್, ಜಾಲಿ, ಜಾಕೋಬಿ, ಬಾನರ್ಜಿಶಾಸ್ತ್ರಿ ಮತ್ತು ಭಂಡಾರ್‌ಕರ್.... ಕ್ರಿ.ಶ. ೩ನೇ ಶತಮಾನ
ಲಿಸ್ಸಿ ಮತ್ತು ವಿಂಟರ್‌ನಿಟ್ಸ್ .... ಕ್ರಿ.ಶ. ೪ನೇ ಶತಮಾನ
ಶಂಕರ್ .... ಕ್ರಿ ಶ. ೫-೬ನೇ ಶತಮಾನ
ದೇವಧರ್, ಬಾರ್ನೆಟ್, ಹೀರಾನಂದಶಾಸ್ತ್ರಿ, ನೆರುರ್‌ಕರ್, ಪಿಶರೋಟಿ.... ಕ್ರಿ.ಶ. ೭ನೇ ಶತಮಾನ
ಕಾಣೆ .... ಕ್ರಿ.ಶ. ೯ನೇ ಶತಮಾನ
ರಾಮಾವತಾರಶರ್ಮ .... ಕ್ರಿ ಶ. ೧೦ನೇ ಶತಮಾನ
ರಂಗಚಾರ್ಯ ರೆಡ್ಡಿ .... ಕ್ರಿ.ಶ. ೧೧ನೇ ಶತಮಾನ

ಸೂಚನೆ—ಪ್ರೊ. ಮೆಗ್ಡಾನಲ್‌ರವರು ಭಾಸನ ಕಾಲದ ವಿಷಯದಲ್ಲಿ ತಮ್ಮ ಅಭಿಪ್ರಾಯವನ್ನು ವ್ಯಕ್ತಪಡಿಸಿಲ್ಲ.

ಭಾಸ ವಿರಚಿತ ಗ್ರಂಥಗಳು

ಗಣಪತಿಶಾಸ್ತ್ರಿಗಳು ಪ್ರಕಟಿಸಿದ ಹದಿಮೂರು ರೂಪಕಗಳೂ ಭಾಸಕೃತ ಎಂದೇ ಸಾಮಾನ್ಯವಾಗಿ ಹೇಳಲಾಗುತ್ತಿದೆ. ಇದಲ್ಲದೆ ೧೯೪೧ ರಲ್ಲಿ ಪ್ರಕಟಿತ ವಾದ [1]ಯಜ್ಞಫಲವೆಂಬ ರಾಮಾಯಣದ ಬಾಲಕಾಂಡದ ಕಥೆಯ ಮೇಲೆ ಚಿತವಾದ ಏಳು ಅಂಕಗಳ ನಾಟಕವನ್ನೂ ಭಾಸನದೆಂದೇ ಕೆಲವರು ಅಭಿ ಪ್ರಾಯಪಡುತ್ತಿದ್ದಾರೆ.

ಶಾರ್ಙ್ಗಧರಪದ್ಧತಿಯಲ್ಲಿ ಐದು, ಸುಭಾಷಿತಾವಳಿಯಲ್ಲಿ ನಾಲ್ಕು. ಸದುಕ್ತಿ ರ್ಣಾಮೃತದಲ್ಲಿ ಮೂರು, ಸೂಕ್ತಿಮುಕ್ತಾವಳಿಯಲ್ಲಿ ಒಂದು, — ಹೀಗೆ ಒಟ್ಟು ೩ ಶ್ಲೋಕಗಳನ್ನು ಸುಭಾಷಿತ ಸಂಗ್ರಹಕಾರರು ತಮ್ಮ ತಮ್ಮ ಸಂಗ್ರಹ ಳಲ್ಲಿ ಸೇರಿಸಿ ಅವು ಭಾಸಕೃತವೆಂದು ಹೇಳಿದ್ದಾರೆ. ಆದರೆ ಅವೊಂದೂ ಈಗ ೊರೆತಿರುವ ನಾಟಕಗಳಲ್ಲಂತು ಬರುವುದಿಲ್ಲ.

ಭಾಸರಚಿತವೆಂದು ಹೇಳಲಾಗುತ್ತಿರುವ ಅನಂತಶಯನದ ೧೩ ರೂಪಕ ಳೂ ಗೊಂಡಾಲ್‌ನಲ್ಲಿ ಪ್ರಕಟಿತವಾದ ಯಜ್ಞಫಲವೂ ಉತ್ತಮವಾದ ಸಂಸ್ಕೃತ ೂಪಕಗಳೆಂಬುದರಲ್ಲಿ ಸಂದೇಹವೇ ಇಲ್ಲ. ಇವೆಲ್ಲವೂ ಪ್ರದರ್ಶನಕ್ಕೆ ೋಗ್ಯವಾಗಿರುವುದು ಇವುಗಳ ವೈಶಿಷ್ಟ್ಯ. ಇವು ಭಾಸಕೃತವಾದ ಮೂಲ ಾಟಕಗಳ ಸಂಗ್ರಹಗಳು ಮಾತ್ರ; ಕೇರಳದ ನಟರಿಂದ ಪ್ರದರ್ಶನಕ್ಕಾಗಿಯೇ ೀಗೆ ರೂಪಾಂತರಿತವಾದುವು ಎಂದು ಕೆಲವರು ವಾದಿಸುತ್ತಾರೆ. ಈ ನಾಟಕ ಳಲ್ಲಿ ಪುರುಷಪಾತ್ರಗಳೇ ಹೆಚ್ಚು. ದೂತವಾಕ್ಯ, ಕರ್ಣಭಾರಗಳಲ್ಲಿ ಸ್ತ್ರೀ ಾತ್ರವೇ ಇಲ್ಲ. ಪಂಚರಾತ್ರದಲ್ಲಿ ಬರುವ ಬೃಹನ್ನಳೆ ವಸ್ತುತಃ ಅರ್ಜುನನೇ. ಂಚರಾತ್ರದ ಕಥಾವಸ್ತುವಿಗೂ ಮಹಾಭಾರತದ ಕಥೆಗೂ ಸಂಬಂಧವೇ ಲ್ಲ. ಭಾಸನ ಪಂಚರಾತ್ರರೀತ್ಯಾ ಮಹಾಭಾರತದ ಯುದ್ಧವೇ ನಡೆಯು ುದಿಲ್ಲ. ಹೀಗೆಯೇ ಒಂದೊಂದು ನಾಟಕದಲ್ಲೂ ಭಾಸನ ಕೈವಾಡ ಪರಿಪೂರ್ಣ ಾಗಿದೆ. ಒಟ್ಟಿನಲ್ಲಿ ಈ ನಾಟಕಗಳೆಲ್ಲಾ ಕಾಳಿದಾಸಾದಿಗಳಿಂದ ರಚಿತವಾದ ಾಟಕಗಳಿಗಿಂತ ಸ್ವರೂಪತಃ ಭಿನ್ನವಾಗಿದ್ದರೂ ಭಾವಪುಷ್ಟಿ ರಚನಾಕೌಶಲ ಲಾನೈಪುಣ್ಯಗಳ ದೃಷ್ಟಿಯಿಂದ ಅವೆಲ್ಲಕ್ಕೂ ಆದರ್ಶಪ್ರಾಯವಾಗಿವೆ.

---

1 ಅಜ್ಞಾತಕರ್ತೃಕವಾದ ಈ ನಾಟಕವನ್ನು ಕಾಠೆಯವಾಡದ ಗೊಂಡಾಲ್‌ನಲ್ಲಿ ಶ್ರೀ ೀವರಾಮ ಕಾಳಿದಾಸ ಶಾಸ್ತ್ರಿಗಳು ಪ್ರಕಟಿಸಿ ಇದೂ ಭಾಸಕೃತವೆಂದೇ ನಿರೂಪಿಸಿದ್ದಾರೆ.

ಊರುಭಂಗ

ಭಾಸನು ಮಹಾಭಾರತದ ಕಥೆಯ ಆಧಾರದಮೇಲೆ ರಚಿಸಿರುವ ಆರು ರೂಪಕಗಳಲ್ಲಿ ಪಂಚರಾತ್ರವು ಮಾತ್ರ ಮೂರು ಅಂಕಗಳುಳ್ಳದ್ದು; ಉಳಿದ ದೂತಘಟೋತ್ಕಚ, ದೂತವಾಕ್ಯ, ಮಧ್ಯಮವ್ಯಾಯೋಗ, ಕರ್ಣಭಾರ ಮತ್ತು ಊರುಭಂಗಗಳು ಐದೂ ಏಕಾಂಕಗಳು. ಇಷ್ಟು ಏಕಾಂಕರೂಪಕಗಳನ್ನು ಸಂಸ್ಕೃತದಲ್ಲಿ ಬರೆದಿರುವ ಕವಿ ಭಾಸನೊಬ್ಬನೇ ಎಂದು ಧಾರಾಳವಾಗಿ ಹೇಳಬಹುದು. ಈ ಏಕಾಂಕಗಳಲ್ಲಿ ಕೊನೆಯದಾದ ಊರುಭಂಗದಲ್ಲಿ ರಂಗಮಂಚದ ಮೇಲೆಯೇ ನಾಯಕನಾದ ದುರ್ಯೋಧನನ ಮರಣವು ಪ್ರದರ್ಶಿತವಾಗಿರುವುದರಿಂದ ಅದು ದುಃಖಾಂತ ನಾಟಕವೆನ್ನುವುದು ಸುಸ್ಪಷ್ಟ. ಸಂಸ್ಕೃತರೂಪಕ ವಾಙ್ಮಯದಲ್ಲಿ ಇಂತಹ ದುಃಖಾಂತನಾಟಕ ಊರುಭಂಗವೊಂದೇ.

ಸಂವಿಧಾನ ಕೌಶಲ

ಭೀಮ ದುರ್ಯೋಧನರ ಗದಾಯುದ್ಧದಲ್ಲಿ ತೊಡೆಮುರಿದ ದುರ್ಯೋಧನನ ಮರಣವೇ ಊರುಭಂಗದ ಕಥಾವಸ್ತು. ಗದಾಯುದ್ಧದ ಪ್ರಕರಣ ಇಲ್ಲಿ ಅಪ್ರಧಾನ; ಅದರ ವರ್ಣನೆಯನ್ನು ಮಾತ್ರ ವಿಷ್ಕಂಭದಲ್ಲಿ ನಾಟಕದ ಹಿನ್ನೆಲೆಯಾಗಿ ಪ್ರೇಕ್ಷಕರು ಕೇಳುತ್ತಾರೆ. ರಂಗಮಂಚದಮೇಲೆ ಪ್ರದರ್ಶಿತವಾಗುವುದು ಗದಾಯುದ್ಧವಾಗಿ ದುರ್ಯೋಧನನ ತೊಡೆ ಮುರಿದಮೇಲೆ ಅವನ ಪ್ರಾಣೋತ್ಕ್ರಮಣವಾಗುವವರೆಗಿನ ಸನ್ನಿವೇಶ. ಇದು ಮೊದಲಿನಿಂದ ಕೊನೆಯವರೆಗೂ ಭಾಸನಿಂದಲೇ ಕಲ್ಪಿತವಾದುದು. ಆದ್ದರಿಂದಲೇ ಅನಿರ್ವಚನೀಯ ಸ್ವಾರಸ್ಯದಿಂದ ಕೂಡಿದ ಸಂವಿಧಾನ ಕೌಶಲವನ್ನಿಲ್ಲಿ ನಾವು ಕಾಣುತ್ತೇವೆ.

ಯಾರ ಪಕ್ಷವನ್ನೂ ಹಿಡಿದು ತಾನು ಯುದ್ಧಮಾಡುವುದಿಲ್ಲವೆಂದು ಪ್ರತಿಜ್ಞೆಮಾಡಿ ಹೊರಟುಹೋಗಿದ್ದ ಬಲದೇವನು ಯುದ್ಧಭೂಮಿಗೆ ಹಿಂದಿರುಗುವುದಕ್ಕೆ ಸರಿಯಾಗಿ ಭೀಮ ದುರ್ಯೋಧನರ ಗದಾಯುದ್ಧ ನಡೆಯುತ್ತಿರುತ್ತದೆ. ಬಲದೇವನು ದುರ್ಯೋಧನನಿಗೆ ಗದಾಯುದ್ಧವನ್ನು ಕಲಿಸಿದ್ದವನು. ತನ್ನ ಶಿಷ್ಯನ ಯುದ್ಧಕ್ರಮವನ್ನು ಕಣ್ಣಾರ ಕಂಡು, ಅವನು ಮೊದಲಬಾರಿಗೆ ಭೀಮನನ್ನು ಕೆಳಕ್ಕೆ ಬೀಳಿಸಿದಾಗ, ಹೆಮ್ಮೆಯಿಂದ ತನ್ನ ಹಲಾಯುಧವನ್ನು ತಿರುಗಿಸಿ ಒಳಗೊಳಗೇ ತೃಪ್ತನಾಗುತ್ತಾನೆ. ಆದರೆ ಸ್ವಲ್ಪ ಸಮಯದಲ್ಲೇ ಅದೇ ದುರ್ಯೋಧನನನ್ನು ಭೀಮನು ಯುದ್ಧನಿಯಮವನ್ನುಲ್ಲಂಘಿಸಿ, ಅವನ ತೊಡೆಯಮೇಲೆ

ಗದೆಯನ್ನು ಬೀಸಿ, ಕೆಡವಿದಾಗ ಅವನ ಕೋಪ ಮಿತಿಮೀರುತ್ತದೆ. ಇದನ್ನು ಕಂಡ ವ್ಯಾಸರು ಅಲ್ಲೇ ಪ್ರೇಕ್ಷಕರಾಗಿದ್ದ ಪಾಂಡವರಿಗೂ ಕೃಷ್ಣನಿಗೂ ಹೇಳಿ ಭೀಮನನ್ನು ಅವರು ಬೇರೆ ಕಡೆಗೆ ಕರೆದೊಯ್ಯುವಂತೆ ಮಾಡುತ್ತಾರೆ.[1] ಇದ ರಿಂದ ಮತ್ತೂ ಉದ್ರಿಕ್ತನಾದ ಬಲದೇವನು ರಣಭೂಮಿಯಲ್ಲಿ ತುಂಬ ದೂರದಲ್ಲಿ ಒಬ್ಬಂಟಿಗನಾಗಿ ಬಿದ್ದಿದ್ದ ದುರ್ಯೋಧನನ್ನು ಕುರಿತು 'ಸ್ವಲ್ಪ ಜೀವ ಹಿಡಿದುಕೋ, ಅಷ್ಟರಲ್ಲಿ ಪಾಂಡವರನ್ನೆಲ್ಲಾ ಸಂಹರಿಸಿಬಿಡುತ್ತೇನೆ' ಎನ್ನುತ್ತಾನೆ; ಇಲ್ಲಿ, ಇಲ್ಲಿಂದ ಮುಂದೆ, ಭಾಸನ ಸಂವಿಧಾನಾದಿ ಕೌಶಲವನ್ನು ರಂಗಸೂಚನೆ ಮೊದಲು ಗೊಂಡು ನಾಟಕದ ಪಾತ್ರಗಳು ಅವರ ಮಾತುಗಳು ಮುಂತಾಗಿ ಹೆಜ್ಜೆ ಹೆಜ್ಜೆ ಯಲ್ಲೂ ಕಾಣಬಹುದು. ಈಗ ರಂಗಮಂಚದಮೇಲೆ ನಮಗೆ ಕಾಣುತ್ತಿರು ವವನು ಉಗ್ರಮೂರ್ತಿ ಬಲದೇವನು ಮಾತ್ರ. ದುರ್ಯೋಧನ ತುಂಬ ದೂರದಲ್ಲಿ ಎಲ್ಲೋ ತೊಡೆಮುರಿದು ಬಿದ್ದಿದ್ದಾನೆ. ಆದರೆ ಬಲದೇವನ ಮಾತು ಅವನಿಗೆ ಕೇಳಿ ಸುತ್ತದೆ. ಆಗ ಅವನು ಬಲದೇವನಲ್ಲಿಗೆ ಎದ್ದು ನಡೆದುಬರಲಾರದೆ ಮಕ್ಕಳಂತೆ ತೆವಳಿಕೊಂಡು ಬರುತ್ತಾನೆ. ಹಾಗೆ ಬರುತ್ತಾ ಕೋಪವನ್ನು ಬಿಟ್ಟು ಪ್ರಸನ್ನನಾಗ ಬೇಕೆಂದು ಹಲಾಯುಧನನ್ನು ದೂರದಿಂದಲೇ ಬೇಡಿಕೊಳ್ಳುತ್ತಾನೆ. ದುರ್ಯೋ ಧನ ಸಾರ್ವಭೌಮ ಹಿಂದೆ ಇದ್ದ ಸ್ಥಿತಿಯೇನು! ಅವನ ಅಭಿಮಾನವೆಂತಹುದು! ಅವನ ಗತಿ ಹೀಗಾಯಿತಲ್ಲ!—ಎಂದು ನಾವು ಮರುಗುವುದರೊಳಗೆ, ಅವನು ಬಲದೇವನನ್ನು ಕುರಿತು—'ನಿನ್ನ ಕಾಲುಗಳಿಗೆ ಎರಗುತ್ತೇನೆ. ಕೋಪವನ್ನು ತ್ಯಜಿಸಿ ಬಿಡು. ಕುರುವಂಶಕ್ಕೆ ಜಲಾಂಜಲಿ ನೀಡಲು ಉಳಿದಿರುವ ಪಾಂಡವರು ಬದುಕಿರಲಿ. ವೈರ, ಯುದ್ಧದ ಕಥೆ, ನಾವು–ಎಲ್ಲಾ ಮುಗಿದುಹೋಯಿತು' ಎಂದು ಹೇಳುತ್ತಾನೆ. ಇದರಿಂದ ನಮ್ಮ ಅನುಕಂಪ ದುರ್ಯೋಧನನ ಕಡೆಗೆ ಹೆಚ್ಚುತ್ತದೆ. ಬಲದೇವನು ಇಷ್ಟಾದರೂ ಮನಸ್ಸನ್ನು ಬದಲಿಸದಿರಲು ದುರ್ಯೋಧನ—'ಭೀಮ ತನ್ನ ಪ್ರತಿಜ್ಞೆ ಯನ್ನು ಈಡೇರಿಸಿಕೊಂಡುಬಿಟ್ಟ; ನನ್ನ ನೂರು ಸೋದರರೂ ಹೋಗಿಬಿಟ್ಟರು; ನಾನೂ ಈ ಗತಿಗೆ ಬಂದಿದ್ದೇನೆ. ಇನ್ನು ಯುದ್ಧದಿಂದ ಏನು ಪ್ರಯೋಜನ?' ಎಂದು ಬಿಚ್ಚು ಮಾತಿನಲ್ಲಿ ಕೇಳುತ್ತಾನೆ. ಆಗ ಬಲದೇವನ ಮನಸ್ಸಿನಲ್ಲಿದ್ದುದು ಹೊರಬರುತ್ತದೆ —'ನನ್ನ ಕಣ್ಣಮುಂದೆಯೇ ನೀನು ವಂಚಿತನಾದೆಯಲ್ಲಾ ಎಂದು ನನಗೆ ಕೋಪ.'

'ನಾನು ವಂಚಿತನಾದೆನೆಂದು ನೀನು ಭಾವಿಸಿದ್ದೀಯಲ್ಲವೆ?'

---

1 ಗದಾಯುದ್ಧವನ್ನು ವ್ಯಾಸರೂ ವಿದುರನೂ ಪ್ರೇಕ್ಷಿಸಿದಂತೆಯೂ ವ್ಯಾಸರು ಹೀಗೆ ಸಲಹೆ ಮಾಡಿದಂತೆಯೂ ಹೇಳಿರುವುದು ಈ ನಾಟಕದಲ್ಲಿ ಮಾತ್ರ; ಮಹಾಭಾರತದಲ್ಲಿಲ್ಲ.

'ಸಂಶಯವೇನು?'

'ಅಷ್ಟು ಸಾಕು. ನನ್ನ ಪ್ರಾಣಗಳ ಬೆಲೆ ಸಿಕ್ಕಂತಾಯಿತು. ಅಂತಹ ಸಾಹಸಿ ಭೀಮನಿಂದ ನಾನು ಮೋಸದಿಂದ ಜಯಿಸಲ್ಪಟ್ಟೆ ಎಂದು ನೀನು ಭಾವಿಸಿರುವೆಯಾದರೆ ನಾನು ಪರಾಜಿತನಲ್ಲ.'

'ನಿನ್ನನ್ನು ಮೋಸದಿಂದ ಗೆದ್ದ ಆ ಭೀಮ ಬದುಕಿರಬೇಕೆ?'

'ನಾನು ಭೀಮನಿಂದ ವಂಚಿತನಾದೆನೆ? ಇಲ್ಲ. ಜಗತ್ಪ್ರಿಯನಾದ ಆ ಕೃಷ್ಣ ಭೀಮನ ಗದೆಯೊಳಕ್ಕೆ ತಟ್ಟನೆ ಹೊಕ್ಕು ನನ್ನನ್ನು ಮೃತ್ಯುವಿಗೆ ದಾನಮಾಡಿಬಿಟ್ಟ'

ಈ ಪುಟ್ಟ ಸಂಭಾಷಣೆಯಿಂದ ಅಭಿಮಾನಿ ದುರ್ಯೋಧನನ ಮನಸ್ಸು ಸ್ವಲ್ಪದರಲ್ಲೇ ಎಷ್ಟು ಉಪಶಾಂತವಾಗಿ ಬಿಟ್ಟಿತ್ತೆಂಬುದನ್ನು ಭಾಸ ಸುಸ್ಪಷ್ಟವಾಗಿ ಚಿತ್ರಿಸಿ, ಅನಿರೀಕ್ಷಿತವಾಗಿ ದುರ್ಯೋಧನನ ತಾಯಿತಂದೆ, ಇಬ್ಬರು ರಾಣಿಯರು ಮತ್ತು ಮಗನನ್ನು ರಂಗಮಂಚದ ಮೇಲೆ ತರುತ್ತಾನೆ. ಅವರೆಲ್ಲಾ ದುರ್ಯೋಧನನ ಊರುಭಂಗದ ವಿಚಾರ ಕೇಳಿ ಅವನನ್ನು ಸಾಯುವ ಮುನ್ನ ಕಾಣಲು ಆತುರಾತುರವಾಗಿ ಆ ಭೀಕರವೂ ಸುವಿಶಾಲವೂ ಆದ ಯುದ್ಧ ಭೂಮಿಗೆ ಬಂದವರು. ಜನ್ಮತಃ ಅಂಧನಾದ ಧೃತರಾಷ್ಟ್ರ ಕಣ್ಣೀರು ಹರಿಸುತ್ತಿದ್ದಾನೆ. ಪತಿಧರ್ಮಪರಾಯಣೆಯಾದ, ಗಂಡನು ದೃಷ್ಟಿಹೀನನಾಗಿರುವಾಗ ತನಗೂ ಆ ದೃಷ್ಟಿ ಬೇಡವೆಂದು ಕಣ್ಣಿಗೆ ಪಟ್ಟಿಕಟ್ಟಿಕೊಂಡಿರುವ ಗಾಂಧಾರಿಯು ಕಣ್ಣೀರಿನಿಂದ ಅವಳ ಕಣ್ಣುಪಟ್ಟಿ ತೊಯ್ದುಹೋಗಿದೆ. ರಾಣಿಯರಿಬ್ಬರೂ ತಲೆಯಮೇಲಿನ ಮುಸುಕು ತೆಗೆದು ದುಃಖಮ್ಲಾನವದನೆಯರಾಗಿ ಅಳುತ್ತಿದ್ದಾರೆ. ಏನೂ ಅರಿಯದ ಮಗು ದುರ್ಜಯ ಅಂಧನಾದ ತಾತನ ಅಂಗವಸ್ತ್ರದ ಸೆರಗನ್ನು ಹಿಡಿದುಕೊಂಡು ಅವನನ್ನು ಮುಂದೆ ನಡೆಸುತ್ತಿದ್ದಾನೆ. ಈ ದೃಶ್ಯವೇ[2] ಸಾಕು ಪ್ರೇಕ್ಷಕರ ಮನ ಕರಗಿಸಲು. ಇನ್ನು ಇವರ ಸಂಭಾಷಣೆಯಂತೂ ಅಳದವರನ್ನೂ ಅಳುವಂತೆ ಮಾಡಿಬಿಡುತ್ತದೆ.

ದೂರದಲ್ಲಿರುವ ದುರ್ಯೋಧನ ಇವರಿಗೆ ಕಾಣಿಸುವುದಿಲ್ಲ; ಆದರೆ ಅವನಿಗೆ ಇವರೆಲ್ಲಾ ಕಾಣಿಸುತ್ತಾರೆ. ತಲೆಕೂದಲು ಕಾಣಿಸುವಂತೆ ಮುಸುಕು ತೆಗೆದು

---

[2] ದುರ್ಯೋಧನನ ಊರುಭಂಗವಾದಾಗ ಅವನ ತಾಯಿತಂದೆ, ಮಗ ಮತ್ತು ರಾಣಿಯರು ಕುರುಕ್ಷೇತ್ರದಿಂದ ಎಷ್ಟೋ ಮೈಲಿಗಳ ದೂರದಲ್ಲಿರುವ ಹಸ್ತಿನಾಪುರದಲ್ಲಿದ್ದಂತೆಯೂ ಅವರಿಗೆ ದುರ್ಯೋಧನನ ವೃತ್ತಾಂತ ತಿಳಿಸಲು ಶ್ರೀಕೃಷ್ಣನು ಅವರಿದ್ದಲ್ಲಿಗೇ ಹೋದಂತೆಯೂ ಮಹಾಭಾರತದಲ್ಲಿ ಉಕ್ತವಾಗಿವೆ.

ಹಾಕಿ ಅಳುತ್ತಿರುವ ತನ್ನ ರಾಣಿಯರನ್ನು ಕಂಡು, 'ಗದೆಯ ಏಟಿನ ನೋವು ನನಗೆ ಈಗ ಅರಿವಾಗುತ್ತಿದೆ' ಎಂದು ದುರ್ಯೋಧನ ಸಂಕಟಪಡುತ್ತಾನೆ.

ದುರ್ಯೋಧನನನ್ನು ಎಲ್ಲರೂ ಹುಡುಕುತ್ತಾರೆ. ಕಣ್ಣು ಕಾಣಿಸದ ಧೃತರಾಷ್ಟ್ರ ಮಗನನ್ನು ಹೆಸರು ಹಿಡಿದು 'ಅಷ್ಟಾದಶಾಕ್ಷೌಹಿಣೀಮಹಾರಾಜ' ಎಂದೂ 'ಪುತ್ರಶತಜ್ಯೇಷ್ಠ' ಎಂದೂ ಕರೆದು 'ಪ್ರತಿವಚನ ಕೊಡು' ಎಂದು ಕೇಳುತ್ತಾನೆ ಕಣ್ಣುಪಟ್ಟಿ ಕಟ್ಟಿಕೊಂಡು ಏನನ್ನೂ ನೋಡಲಾರದ ಗಾಂಧಾರಿ ಸೊಸೆಯರನು. 'ಅನ್ವೇಷತಾಂ ಭರ್ತಾರಂ' ಎಂದು ಬೇಡಿಕೊಳ್ಳುತ್ತಾಳೆ. ದುರ್ಯೋಧನ ತಂದೆಯ ಬಳಿಗೆ ಬೇಗ ಹೋಗಬೇಕೆಂದು ಎದ್ದು ಕೆಳಕ್ಕೆ ಕುಸಿದುಬಿದ್ದು 'ಅಯ್ಯೋ ನನ್ನ ಊರುಗಳೊಡನೆ ಗುರುಪಾದಾಭಿವಂದನೆ ಮಾಡುವ ಶಕ್ತಿಯನ್ನೂ ಭೀಮ ಹರಣವಾಡಿ ಬಿಟ್ಟನಲ್ಲ' ಎಂದು ದುಃಖಿಸುತ್ತಾನೆ.

ಇತ್ತ ಕುಮಾರ ದುರ್ಜಯ ತಾತನ ಅಂಗವಸ್ತ್ರದ ಸೆರಗನ್ನು ಹಿಡಿದು ದಾರಿ ತೋರುತ್ತಾನೆ. ಧೃತರಾಷ್ಟ್ರ ಕೇಳುತ್ತಾನೆ—'ಯಾರಪ್ಪ ನೀನು ?'

'ತಾತ ; ನಾನು ದುರ್ಜಯ'

'ಮಗು ದುರ್ಜಯ, ನಿನ್ನ ತಂದೆಯನ್ನು ಹುಡುಕಪ್ಪ'

'ತುಂಬ ದಣಿದಿದ್ದೇನೆ, ತಾತ !'

'ಹೋಗಿ ನೋಡು. ತಂದೆಯ ತೊಡೆಯಮೇಲೆ ಕುಳಿತುಕೊಳ್ಳುವಿಯಂತೆ.'

'ತಾತ, ಇದೋ ಹೊರಟೆ' ಎಂದು ಹೇಳಿ ದುರ್ಜಯ ದುರ್ಯೋಧನನಿರುವ ಕಡೆಗೆ ಹೋಗುತ್ತಾನೆ. ಪುತ್ರಸ್ನೇಹದಿಂದ ಹಣ್ಣಾದ ಪಿತೃಹೃದಯ ತಳಮಳಿಸುತ್ತದೆ. ಎಂದೂ ಇಲ್ಲದೆ ಇಂದು ನೆಲದಮೇಲೆ ಕುಳಿತಿರುವ ತಂದೆಯನ್ನು ಕಂಡು ದುರ್ಜಯ 'ಇದೇನು ಮಹಾರಾಜನು ನೆಲದಮೇಲೆ ಕುಳಿತಿದ್ದಾನೆ' ಎನ್ನುತ್ತಾನೆ. ತಂದೆಮಕ್ಕಳ ಸಂಭಾಷಣೆ ಈ ಸನ್ನಿವೇಶದಲ್ಲಿ ಹೃದಯ ವಿದ್ರಾವಕವಾಗಿದೆ.

'ಮಗು, ನೀನೇಕೆ ಇಲ್ಲಿಗೆ ಬಂದೆ' ?

'ನೀನು ಎಷ್ಟು ಹೊತ್ತಾದರೂ ಬರಲಿಲ್ಲವಲ್ಲ ಎಂದು. ನಿನ್ನ ತೊಡೆಯ ಮೇಲೆ ಕುಳಿತುಕೊಳ್ಳುತ್ತೇನೆ, ಅಪ್ಪ'. ದುರ್ಜಯ ತಂದೆಯ ತೊಡೆಯ ಮೇಲೆ ಹತ್ತಲು ಹೋಗುತ್ತಾನೆ. 'ದುರ್ಜಯ ! ದುರ್ಜಯ ! ಕಷ್ಟ.'—ಎಂದು ದುರ್ಯೋಧನ ಅವನನ್ನು ತಡೆಯುತ್ತಾನೆ.

'ಏತಕ್ಕಪ್ಪ, ನನ್ನನ್ನು ತಡೆಯುತ್ತೀ ?'

'ಇಲ್ಲಿಯವರೆಗೆ ನಿನಗೆ ಆಸನವಾಗಿದ್ದ ಈ ತೊಡೆ ಇನ್ನಿಲ್ಲ !'

'ಹಾಗಾದರೆ ಮಹಾರಾಜ ಹೋಗುವುದೆಲ್ಲಿಗೆ?'

'ನೂರು ತಮ್ಮಂದಿರನ್ನು ಹಿಂಬಾಲಿಸಿ ಹೋಗುತ್ತೇನೆ'

'ನನ್ನನ್ನೂ ಅಲ್ಲಿಗೆ ಕರೆದುಕೊಂಡು ಹೋಗು'

'ಹೋಗು ಮಗು, ಹಾಗೆಂದು ವೃಕೋದರನೊಂದಿಗೆ ಹೇಳು.' ಈ ಮಾತು ಹೇಳುವಾಗ ದುರ್ಯೋಧನನ ಸಂಕಟ ಎಷ್ಟಿರಬೇಕು! ಎಳೆಯ ಮಗು ದುರ್ಜಯನ ಏನೂ ಅರಿಯದ ಮುಗ್ಧ ಮಾತುಗಳನ್ನೂ ದುರ್ಯೋಧನನ ಸಂಕಟ ವನ್ನೂ ಒಟ್ಟೊಟ್ಟಿಗೆ ಕೇಳಿ ಪ್ರೇಕ್ಷಿಸುವ ನಮ್ಮ ಮನಃಸ್ಥಿತಿ ಏನಾಗಬೇಕು! ಇದು ಅನುಭವೈಕವೇದ್ಯ. ಸ್ವಲ್ಪವೇ ಮಾತುಗಳಲ್ಲಿ ಭಾವ-ರಸಗಳನ್ನು ಹೃದ ಯಂಗಮವಾಗಿ ರೂಪಿಸುವ ಅಸಾಧಾರಣ ಶಕ್ತಿ ಭಾಸನದು. ಸಂಭಾಷಣೆ ಇಷ್ಟಕ್ಕೇ ನಿಲ್ಲುವುದಿಲ್ಲ. ದುರ್ಜಯ ಹೇಳುತ್ತಾನೆ—

'ನಿನ್ನನ್ನು ಹುಡುಕಲಾಗುತ್ತಿದೆ'

'ಮಗು, ಯಾರು ಹುಡುಕುವುದು?'

'ಅಜ್ಜಿ, ಅಜ್ಜ, ಅಂತಃಪುರದವರು ಎಲ್ಲರೂ'

'ಹೋಗು ಮಗು, ನಾನು ಬರಲಾರೆ'

'ನಾನು ನಿನ್ನನ್ನು ಕರೆದುಕೊಂಡು ಹೋಗುತ್ತೇನೆ' (ತನ್ನ ಅಂಧನಾದ ತಾತ ನನ್ನು ಕರೆತಂದಂತೆ ಎಂದು ಭಾವಿಸಿರಬೇಕು ಮುಗ್ಧ ದುರ್ಜಯ).

'ನೀನಿನ್ನೂ ಹಸುಳೆ, ಮಗು'

ಈ ಮಾತನ್ನು ಕೇಳಿ ದುರ್ಜಯ ತಾಯಂದಿರನ್ನೂ ಅಜ್ಜಿಯನ್ನೂ ಅಜ್ಜನನ್ನೂ ಅಲ್ಲಿಗೇ ಕರೆಯುತ್ತಾನೆ. ಎಲ್ಲರೂ ಒಟ್ಟಿಗೆ ಸೇರುತ್ತಾರೆ. ಕಣ್ಣುಕಾಣದ ಧೃತ ರಾಷ್ಟ್ರನಿಗೆ ದುರ್ಜಯ ಹೇಳುತ್ತಾನೆ—

'ಇದೋ ಇಲ್ಲಿ ನೆಲದಮೇಲೆ ಮಹಾರಾಜ ಕುಳಿತಿದ್ದಾನೆ.'

ಬಗ್ಗಿ ಮಗನನ್ನು ಮುಟ್ಟಿ ನೋಡಿ 'ಏಕೈಕ ಸಾರ್ವಭೌಮನಾಗಿದ್ದವನು ಈಗ ನೆಲದ ಮೇಲೆಯೇ?' ಎಂದು ಧೃತರಾಷ್ಟ್ರ ಮರುಗುತ್ತಾನೆ. ತಾಯಿಯ ಕರುಳು ಮಿಡಿದು ಗಾಂಧಾರಿ ಮಾನಧನನಾದ ಮಗನ ಮನ ನೋಯದಿರಬೇಕೆಂದು ಕೇಳುತ್ತಾಳೆ—'ಮಗು, ಬಳಲಿಕೆಯಾಗಿದೆಯೇ?'

'ನಿನ್ನ ಮಗ ನಾನು. (ನನಗೆಲ್ಲಿಯ ಬಳಲಿಕೆ?)'

ಕಳವಳಗೊಂಡ ತಂದೆಗೆ ದುರ್ಯೋಧನ ಹೇಳುತ್ತಾನೆ—

'ಸಮಾಧಾನ ತಂದುಕೋ. ನನ್ನ ಮಗ ಯುದ್ಧದಲ್ಲಿ ಪರಾಙ್ಮುಖನಾಗದೆ ಹತನಾದ

ಎಂದು. ನಾನು ಯಾವ ಅಭಿಮಾನದೊಡನೆ ಜನಿಸಿದೆನೋ ಅವೇ ಅಭಿಮಾನದೊಡನೆ ಸ್ವರ್ಗಕ್ಕೆ ತೆರಳುತ್ತೇನೆ.'

ಇದನ್ನೆಲ್ಲ ನೋಡುತ್ತಾ ಕೇಳುತ್ತಾ ಅಲ್ಲೇ ಇರುವ ಬಲದೇವನನ್ನು ಗಾಂಧಾರಿಯೂ ಧೃತರಾಷ್ಟ್ರನೂ ನೋಡಲಾರರಾದ್ದರಿಂದ ಅವನಿಗೆ ತನ್ನ ಸ್ಥಿತಿ ಸ್ವಲ್ಪಮಟ್ಟಿಗೆ ಸಹ್ಯವಾಗಿತ್ತೆನ್ನಬಹುದು. ಆದರೆ ಅವನ ಮನಸ್ಸಿನ ತಳಮಳ ಹೇಳತೀರದು.

ತಾಯಿಯ ಕಡೆ ತಿರುಗಿ ದುರ್ಯೋಧನ ಹೇಳುತ್ತಾನೆ—

'ಅಮ್ಮಾ, ನಾನೇನಾದರೂ ಪುಣ್ಯಮಾಡಿದ್ದರೆ, ನಿನ್ನ ಕಾಲು ಮುಟ್ಟಿ ಹೇಳುತ್ತೇನೆ — ಮುಂದಿನ ಜನ್ಮದಲ್ಲೂ ನೀನೇ ನನಗೆ ತಾಯಿಯಾಗು.' ಎಂತಹ ಮಾತು! ಇದನ್ನು ಕೇಳಿ ಹೃದಯ ಮಿಡಿಯದೆ, ಕಣ್ಣು ಕಂಬನಿ ಹರಿಸದೆ ಇರುವುದು ಸಾಧ್ಯವೇ?

ದುರ್ಯೋಧನ ಇನ್ನೊಂದು ಘಳಿಗೆಯಲ್ಲೋ ಎರಡು ಘಳಿಗೆಯಲ್ಲೋ ಸಾಯುವವನು. ಅದು ಅವನಿಗೂ ಗೊತ್ತು; ಮತ್ತಿತರರಿಗೂ ಗೊತ್ತು. ಆದ್ದರಿಂದ ಏನು ಹೇಳುವುದಿದ್ದರೂ ಬೇಗ ಹೇಳಬೇಕು. ಏನು ಮಾಡುವುದಿದ್ದರೂ ವಿಳಂಬವಿಲ್ಲದೆ ಮಾಡಬೇಕು. ಈ ಭಾವನೆ ಈ ಸನ್ನಿವೇಶದಲ್ಲಿ ಎಲ್ಲರಿಗಿಂತ ಹೆಚ್ಚಾಗಿ ದುರ್ಯೋಧನನಲ್ಲಿ ಮೂಡಿರುವುದು ಸ್ಪಷ್ಟವಾಗಿದೆ ಅವನು ತನ್ನ ಹೆಂಡತಿಯರಿಬ್ಬರ ಕಡೆಗೆ ತಿರುಗಿ, ಮಾಲವಿ, ಪೌರವಿ ಎಂದು ಅವರವರ ಹೆಸರು ಹಿಡಿದು ಮಾತಾಡಿಸಿ ಸಮಾಧಾನ ಹೇಳುತ್ತಾನೆ. ಅವನ ಮಾತು ಒಂದೇ— 'ನಿಮ್ಮ ಗಂಡ ಪರಾಙ್ಮುಖನಾಗಿ ಯುದ್ಧದಲ್ಲಿ ಹತನಾಗಲಿಲ್ಲ. ವೀರನಾಗಿ, ಅಭಿಮಾನಿಯಾಗಿ ದರ್ಮ ಯುದ್ಧಮಾಡುತ್ತಾ ಮಡಿದ. ಆದ್ದರಿಂದ ನೀವು ಅಳಬಾರದು' ಎಂದು. ಎಲ್ಲದಕ್ಕಿಂತ ಮಗು ದುರ್ಜಯನಿಗೆ ಅವನು ಹೇಳುವ ಮಾತು—'ನಿನಗೆ ನಾನು ಹೇಗೋ ಹಾಗೆಯೇ ಪಾಂಡವರೂ. ಅವರ ಶುಶ್ರೂಷೆ ಮಾಡು. ತಾಯಿ ಕುಂತಿಯ ಅಪ್ಪಣೆಯನ್ನು ಪಾಲಿಸು. ಸುಭದ್ರೆ ದ್ರೌಪದಿಯರನ್ನು ತಾಯಂದಿರಂತೆ ಕಾಣು. ನಾನು ಅಸು ನೀಗಿದ ಮೇಲೆ ಪಾಂಡವರೊಡನೆ ಕಲೆತೇ ನನಗೆ ಜಲಾಂಜಲಿ ಕೊಡು.' ಹಸುಳೆ ದುರ್ಜಯನಿಗೆ ಅರ್ಥವಾಯಿತೋ ಇಲ್ಲವೋ! ಆದರೆ ಅದು ಅಲ್ಲಿ ನೆರೆದಿದ್ದವರ ಮೇಲೂ ಪ್ರೇಕ್ಷಕರ ಮೇಲೂ ಎಂತಹ ಪರಿಣಾಮವುಂಟುಮಾಡುವುದೆಂಬುದರ ದಿಗ್ದರ್ಶನವನ್ನು ಭಾಸನೇ ಬಲರಾಮನಿಂದ 'ಅಹೋ! ವೈರಂ ಪಶ್ಚಾತ್ತಾಪಃ ಸಂವೃತ್ತಃ!' ಎಂದು ನುಡಿಸಿ ಮಾಡಿಕೊಟ್ಟಿದ್ದಾನೆ. ಕರುಣರಸಪರಿಪೂರ್ಣವಾದ ಸನ್ನಿವೇಶವು

ಹೀಗಿರುವಾಗ ರೌದ್ರಾವತಾರ ತಾಳಿದ ಅಶ್ವತ್ಥಾಮ ಅನಿರೀಕ್ಷಿತವಾಗಿ ಆರ್ಭಟಿ ಸುತ್ತಾ ಅಲ್ಲಿಗೆ ಬಂದು ದುರ್ಯೋಧನನನ್ನು ಕೇಳುತ್ತಾನೆ—

'ಕುರುರಾಜ, ಇದೇನು ?'

'ಅಪರಿತೋಷದ ಫಲ, ಗುರುಪುತ್ರ.'

'ನಾನು ಯುದ್ಧ ಹೂಡಿ ಪಾಂಡವರನ್ನೂ ಕೃಷ್ಣನನ್ನೂ ಸಂಹರಿಸಿಬಿಡುತ್ತೇನೆ.'

'ಬೇಡ, ಬೇಡ. ಅಭಿಷಿಕ್ತರಾಗಿದ್ದ ರಾಜರ ಗುಂಪಿಗೆ ಗುಂಪೇ ಭೂಮಿಯ ಮಡಿಲನ್ನು ಸೇರಿಬಿಟ್ಟಿತು. ಕರ್ಣ ಸ್ವರ್ಗಕ್ಕೆ ತೆರಳಿಬಿಟ್ಟ. ಭೀಷ್ಮರೂ ಮಡಿದು ಹೋದರು. ನನ್ನ ನೂರು ತಮ್ಮಂದಿರೂ ಹತರಾದರು. ನಾವೂ ಈ ಸ್ಥಿತಿಯಲ್ಲಿದ್ದೇವೆ. ಗುರುಸುತ! ಧನುಸ್ಸನ್ನು ತ್ಯಜಿಸಿಬಿಡು.'

'ಇದೇನು ಕುರುರಾಜ! ಭೀಮನು ನಿನ್ನ ತೊಡೆ ಮುರಿದುದಲ್ಲದೆ ನಿನ್ನ ದರ್ಪವನ್ನೂ ಅಪಹರಿಸಿಬಿಟ್ಟನೆ ?'

'ಹಾಗೆನ್ನಬೇಡ. ರಾಜರು ಮಾನಶರೀರಿಗಳು. ನಾನು ಯುದ್ಧಮಾಡಿದುದೂ ಮಾನಾರ್ಥವಾಗಿಯಲ್ಲವೆ? ಆದರೂ ನೋಡು, ನಾನು ಅವರಿಗೆ ಎಷ್ಟೆಷ್ಟು ದೊಡ್ಡ ದೊಡ್ಡ ಕಷ್ಟಗಳನ್ನು ಕೊಟ್ಟೆ. ಆ ದೃಷ್ಟಿಯಿಂದ ಅವರು ನನಗೆ ಮಾಡಿರುವುದು ತೀರ ಸ್ವಲ್ಪ ಅಲ್ಲವೆ?'

'ಅದೇನೋ. ನಾನಂತು ಆಣೆಯಿಟ್ಟು ಹೇಳುತ್ತೇನೆ. ರಾತ್ರಿ ಯುದ್ಧ ಹೂಡಿ ಪಾಂಡವರನ್ನು ಧ್ವಂಸಮಾಡಿಬಿಡುತ್ತೇನೆ.'

ಇಷ್ಟು ಹೊತ್ತೂ ಮೌನವಾಗಿದ್ದ ಬಲ್ಲರಾಮ ಈಗ ನುಡಿಯುತ್ತಾನೆ—'ಗುರುಪುತ್ರನಾಡಿದ ಮಾತು ಸತ್ಯವಾಗಲೇ ಬೇಕು.' ಬಲರಾಮನೂ ಅಲ್ಲಿರುವುದನ್ನು ಅಶ್ವತ್ಥಾಮನು ಆಗ ತಾನೇ ಗಮನಿಸುತ್ತಾನೆ. ಅವನ ಕೋಪಾಂಧತೆ ಅಷ್ಟರ ಮಟ್ಟಿಗಿತ್ತು. ಧೃತರಾಷ್ಟ್ರನಿಗೂ ಈ ಮಾತು ಕೇಳಿಸಿ 'ಅಯ್ಯೋ, ಇದಕ್ಕೆ ಸಾಕ್ಷಿಯೂ ಸೇರಿತೇ' ಎಂದು ಮರುಗುತ್ತಾನೆ.

ವಿಳಂಬಕ್ಕೆ ಕಾಲವಲ್ಲವಾದ್ದರಿಂದ ಅಶ್ವತ್ಥಾಮನು ಕುಮಾರ ದುರ್ಜಯನನ್ನು ಕರೆದು 'ವಿನಾಭಿಷೇಕಂ ರಾಜಾ ತ್ವಂ ವಿಪ್ರೋಕ್ತೈಃ ವಚನೈಃ ಭವ' ಎಂದು[3] ಹರಸುತ್ತಾನೆ. ತನ್ನ ಕಣ್ಣ ಮುಂದೆಯೇ ದುರ್ಜಯ ಈ ರೀತಿ ರಾಜಪದವಿಗೆ ಏರಿಸಲ್ಪಟ್ಟದ್ದನ್ನು ಕಂಡು ದುರ್ಯೋಧನನಿಗಂತು ತುಂಬ ಸಮಾಧಾನವಾಗುತ್ತದೆ. ಪುತ್ರವಾತ್ಸಲ್ಯವುಳ್ಳ ಯಾವ ಅಭಿಮಾನಿ ತಂದೆಗೆ ತನ್ನ ಮಗನೇ ತನ್ನ ಬಳಿಕ ರಾಜನಾಗಬೇಕೆಂದಿರುವುದಿಲ್ಲ! ದುರ್ಯೋಧನನ ಈ ಬಯಕೆಯನ್ನು

3 ದುರ್ಯೋಧನನೇ ಅಶ್ವತ್ಥಾಮನನ್ನು ಮುಂದಿನ ಸೇನಾಪತಿಯೆಂದು ಅಭಿಷೇಕ ಮಾಡಿದುದಾಗಿ ಮಹಾಭಾರತದಲ್ಲಿ ಹೇಳಿದೆ. ಅಲ್ಲಿ ದುರ್ಜಯ ಮುಂದಿನ ರಾಜನಾಗಬೇಕೆನ್ನುವ ಪ್ರಸಕ್ತಿಯೇ ಇಲ್ಲ.

ವಾಚಿಕವಾಗಿಯಾದರೂ ಅಶ್ವತ್ಥಾಮನು ಇಲ್ಲಿ ಈಡೇರಿಸುವಂತೆ ಭಾಸ ಮಾಡಿರುವುದು ಅವನ ಅಪ್ರತಿಮ ಪ್ರತಿಭೆಯನ್ನೂ ಮಾನವ ಸಹಜ ಆಂತರಿಕ ಆಶೆ ಆಕಾಂಕ್ಷೆಗಳ ಅರಿವನ್ನೂ ಪ್ರತಿಬಿಂಬಿಸುತ್ತದೆ.

ಕಾಲ ಮುಗಿಯಿತು. ದುರ್ಯೋಧನನ ಮುಂದೆ ಅವನ ಪಿತಾಮಹಾದಿಗಳೆಲ್ಲ ಕಾಣಿಸಿಕೊಳ್ಳುತ್ತಾರೆ. ಅವನ ತಮ್ಮಂದಿರೂ ಕರ್ಣನೂ ಇಂದ್ರನ ಕೈ ಹಿಡಿದು ನಿಂತಿರುವ ಅಭಿಮನ್ಯುವೂ ಕಾಣಿಸುತ್ತಾರೆ. ಉರ್ವಶ್ಯಾದಿಗಳು ಅವನನ್ನು ಇದಿರು ನೋಡುತ್ತಿದ್ದಾರೆ. ಮಹಾಸಾಗರಗಳೂ ಮಹಾನದಿಗಳೂ ಕಾಣಿಸುತ್ತವೆ. ಸಾವಿರ ಹಂಸ ಹೂಡಿದ ವೀರವಾಹಿ ವಿಮಾನವೂ ಬರುತ್ತದೆ. ದುರ್ಯೋಧನ ಇಹಲೋಕವನ್ನು ತ್ಯಜಿಸಿ ಹೊರಟು ಹೋಗುತ್ತಾನೆ. ಅವನು ಈ ರೀತಿ ಏಕೈಕ ಸಾರ್ವಭೌಮನಾಗಿ ಅಪ್ರತಿಮವೀರನಾಗಿ ಮೆರೆದು ಕೊನೆಯಲ್ಲಿ ತೊಡೆಮುರಿದು ಸೋತು ರಣರಂಗದಂತಹ ಭೀಕರ ಸ್ಥಳದಲ್ಲಿ, ಆದರೆ ಆಪ್ತಮಿತ್ರರೂ ಬಂಧುಗಳೂ ಕೂಡಿರುವಾಗ ಅವರ ಮಧ್ಯೆ ಅವರಿಗೆ ಹೇಳಬೇಕಾದುದನ್ನು ಹೇಳಿ, ಕೇಳಬೇಕಾದುದನ್ನು ಕೇಳಿ, ನೋಡಬೇಕಾದವರನ್ನೆಲ್ಲಾ ನೋಡಿ ಮಡಿದಂತೆ ಭಾಸನಿಂದ ಚಿತ್ರಿತವಾಗಿರುವ ಈ ಪ್ರಸಂಗ ಸಂಸ್ಕೃತ ಸಾಹಿತ್ಯದಲ್ಲೇ ಏಕೈಕವಾದುದು. ಕರುಣ ರಸ ಪರಿಪೋಷಕ್ಕಾಗಿ ಚಿಕ್ಕ ಮುಗ್ಧ ಬಾಲಕನನ್ನು ಬಳಸಿಕೊಂಡಿರುವ ಸನ್ನಿವೇಶವುಳ್ಳ ನಾಟಕವೂ ಪ್ರಾಯಃ ಇದೊಂದೇ ಎಂದು ಹೇಳಬಹುದು.

ಪಾತ್ರರಚನೆ

ಸಂವಿಧಾನ ಕೌಶಲದಲ್ಲಿ ಹೇಗೋ ಹಾಗೆ ಪಾತ್ರರಚನೆಯಲ್ಲೂ ಭಾಸನದು ಪಳಗಿದ ಕೈ. ಅವನ ಪಾತ್ರಗಳಲ್ಲಿ ಕೃತಕತೆ ಸ್ವಲ್ಪವೂ ಇಲ್ಲ. ಎಲ್ಲರೂ ಜೀವಂತ ವ್ಯಕ್ತಿಗಳು. ಅವರ ಹೃದಯಾಂತರಾಳದ ಒಳತೋಟಿಯನ್ನು ಪ್ರವೇಶಿಸಿ ಅಲ್ಲಿ ನಡೆಯುವುದೊಂದೊಂದನ್ನೂ ಪ್ರೇಕ್ಷಕರ ಕಣ್ಣಮುಂದೆ ಕಟ್ಟಿದಂತೆ ಕೆಲವೇ ಮಾತುಗಳಲ್ಲಿ ಚಿತ್ರಿಸುವ ಅಸಾಧಾರಣ ಶಕ್ತಿ ಭಾಸನಲ್ಲಿ ಮೈಗೂಡಿಕೊಂಡಿದೆ. ಆದ್ದರಿಂದಲೇ ಅವನ ಪಾತ್ರಗಳು ಎಲ್ಲರಿಗೂ ಅಚ್ಚುಮೆಚ್ಚು.

4 ಅಶ್ವತ್ಥಾಮನಿಂದ ಸೌಪ್ತಿಕವಧವಾಗಿ ಅದರ ವಿಚಾರ ತಿಳಿದಮೇಲೆ, ಅಂದರೆ ಗದಾಯುದ್ಧದಲ್ಲಿ ಊರುಭಂಗವಾದ ದಿವಸ ರಾತ್ರಿಯೆಲ್ಲಾ ಬದುಕಿದ್ದು, ಮರುದಿನ ಬೆಳಗ್ಗೆ ದುರ್ಯೋಧನ ಸಾಯುವುದಾಗಿ ಮಹಾಭಾರತದ ಕಥೆ.

ದುರ್ಯೋಧನ

ಭಾಸನ ಊರುಭಂಗದ ನಾಯಕನಾದ ದುರ್ಯೋಧನನ ಪಾತ್ರವನ್ನೇ ಪರಿಶೀಲಿಸಿ ನೋಡಿ. ಅವನೊಬ್ಬ ಆದರ್ಶ ಧೀರೋದಾತ್ತ. ಮಹಾಭಾರತದ ದುಷ್ಟನೂ, ಆತ್ಮಶ್ಲಾಘಿಯೂ, ಕಲಹಪ್ರಿಯನೂ, ಗರ್ವಿಷ್ಠನೂ ಆದ ಧೀರೋದ್ಧತನಾದ ದುರ್ಯೋಧನನೆಲ್ಲಿ! ಊರುಭಂಗದ ಉಪಶಾಂತನೂ ಉದಾರಿಯೂ ವಸ್ತುತಸ್ಥಿತಿಯ ಅರಿವುಳ್ಳವನೂ ಸ್ವಾಭಿಮಾನವುಳ್ಳ ವೀರನೂ ಆದ ನಾಯಕನೆಲ್ಲಿ! ಗದಾಯುದ್ಧದ ಮೊದಲ ಹಂತದಲ್ಲಿ ಭೀಮನು ಕೆಳಗೆ ಬಿದ್ದು ಕಂಗೆಟ್ಟಿದ್ದಾಗ ದುರ್ಯೋಧನನಾಡುವ 'ನ ತು ಭೀಮ ದೀನಂ, ವೀರೋ ನಿಹಂತಿ ಸಮರೇಷು ಭಯಂ ತ್ಯಜ' ಎಂಬ ಮಾತು ಯುದ್ಧನಿಯಮ ಪರಿಪಾಲನೆಯಲ್ಲಿ ದುರ್ಯೋಧನನಿಗಿದ್ದ ಆಸಕ್ತಿಯನ್ನೂ ಅವನ ಘನತೆವೆತ್ತ ಮಹಾಪುರುಷತ್ವವನ್ನೂ ತೋರಿಸುತ್ತದೆ. ಇಂತಹ ನ್ಯಾಯಪರನಾದ ವೀರಪುರುಷನು ಈ ಮಾತಾಡಿದ ಸ್ವಲ್ಪ ಹೊತ್ತಿಗೇ, ಅನ್ಯಾಯರೀತಿಯಲ್ಲಿ ತೊಡೆಯಮೇಲೆ ಬೀಸಿದ ಗದೆಯೇಟಿನಿಂದ ಭಗ್ನೋರುವಾಗಿ ಬಿದ್ದು ಸೋತು ಸಾಯಬೇಕಾಗುವುದು ವಿಧಿಯ ಅಣಕವಾದರೂ ಶೋಚನೀಯ. ನಮ್ಮ ನಿತ್ಯಜೀವನದಲ್ಲಿ, ಅನುಭವದಲ್ಲಿ, ಇಂತಹ ಅನ್ಯಾಯ ಪ್ರಕರಣಗಳೆಷ್ಟು ನಡೆದಿಲ್ಲ, ನಡೆಯುತ್ತಿಲ್ಲ! ಆದ್ದರಿಂದ ದುರ್ಯೋಧನನಿಗಾದ ಅನ್ಯಾಯ ಲೋಕ ಸಹಜವಾದುದೇನೋ ಸರಿ. ಅದನ್ನು ಕಂಡು ನಾವು ಬೇಕಾದರೆ 'ಅಯ್ಯೋ ಪಾಪ' ಎಂದು ಮರುಗಬಹುದೇ ವಿನಾ ದುರ್ಯೋಧನನೇನೂ ಅದಕ್ಕಾಗಿ ಕೊರಗುವುದಿಲ್ಲ. ತಾನು ಅನ್ಯಾಯಮಾಡಲಿಲ್ಲ. ಭೀಮನು ಅನ್ಯಾಯಮಾರ್ಗದಲ್ಲಿ ತನ್ನನ್ನು ಹೊಡೆದ. ಆದ್ದರಿಂದ ವ್ಯಾವಹಾರಿಕವಾಗಿ ತಾನು ಸೋತಿದ್ದರೂ ನಿಜವಾಗಿ ನೋಡಿದರೆ ತಾನು ಪರಾಜಿತನಲ್ಲವೇ ಅಲ್ಲ. ಎಂಬುದೇ ಅವನಿಗೆ ಸಮಾಧಾನ. ಅದೂ ಅಲ್ಲದೆ, ಅವನದು ವಾಸ್ತವಿಕ ದೃಷ್ಟಿ. ಕೃಷ್ಣನ ಸಂಜ್ಞೆಯಿಂದ ಭೀಮ ತನ್ನ ತೊಡೆಯ ಮೇಲೆ ಗದೆ ಬೀಸಿದ್ದುದನ್ನು ಕಣ್ಣಾರ ಕಂಡಿದ್ದುದರಿಂದ ತನ್ನ ಸೋಲಿಗೂ ಸಾವಿಗೂ ಕಾರಣನಾದವನು ಜಗತ್ಪ್ರಿಯನಾದ ಕೃಷ್ಣನೇ, ಭೀಮನಲ್ಲ ಎಂಬುದನ್ನೂ ಅರಿತಿದ್ದಾನೆ. ಆದ್ದರಿಂದಲೇ ಭೀಮನ ವಿಚಾರವಾಗಿ ಒಂದು ಕೆಟ್ಟ ಶಬ್ದವನ್ನೂ ಅವನಾಡುವುದಿಲ್ಲ. ಮೇಲಾಗಿ ತನಗೆ ಗದಾಯುದ್ಧ ಕಲಿಸಿದ ವಿದ್ಯಾಗುರುವಾದ ಬಲದೇವನಿಗೆ ವಾಚ್ಯವಾಗಿಯೇ 'ಭೀಮನ ಗದೆಯೊಳಕ್ಕೆ ಜಗತ್ಪ್ರಿಯನಾದ ಕೃಷ್ಣ ತಟ್ಟನೆ ಪ್ರವೇಶಿಸಿ, ನನ್ನನ್ನು ಮೃತ್ಯುವಿಗೆ ದಾನಮಾಡಿಬಿಟ್ಟ' ಎಂದು ತಿಳಿಯಹೇಳುತ್ತಾನೆ. ಇದರ

ಜತೆಗೆ ತಾನೇ ನಿಜವಾದ ಯುದ್ಧವೀರ; ಯುದ್ಧಭೂಮಿಯಿಂದ ಹಿಮ್ಮೆಟ್ಟದೆ ಅಭಿಮುಖ ಯುದ್ಧದಲ್ಲಿ ಮಡಿದವನು ಎಂಬ ಹೆಮ್ಮೆ ಬೇರೆ. ಈ ಹೆಮ್ಮೆಯನ್ನು ಪದೇ ಪದೇ ಎಲ್ಲರಮುಂದೂ ಕೊಚ್ಚಿಕೊಳ್ಳುವುದೊಂದು ಅವನ ಸ್ವಭಾವವೇ ಆಗಿಬಿಟ್ಟದೆ. ತಂದೆಯೊಡನೆ, ಹೆಂಡತಿಯರೊಡನೆ ಕೊನೆಗೆ ತನ್ನ ಮುಗ್ಧ ಮಗನೊಡನೆ 'ಅಪರಾಙ್ಮುಖನಾಗಿ ಯುದ್ಧದಲ್ಲಿ ಹತ'ನಾದ ತನ್ನ ಬಗ್ಗೆ ದುಃಖಿಸಕೂಡದೆನ್ನುತ್ತಾನೆ.

ಈ ಲೋಕದಲ್ಲಿ ಒಬ್ಬೊಬ್ಬರಲ್ಲಿ ಒಂದೊಂದು ಹುಟ್ಟುಗುಣವೋ ದೋಷವೋ ಇರುತ್ತದೆ. ದುರ್ಯೋಧನನಲ್ಲಿ 'ಸ್ವಾಭಿಮಾನ' ಅಂತಹ ಹುಟ್ಟುಗುಣ ಅಥವಾ ದೋಷ. 'ದುರ್ಯೋಧನನ ಮಾನ' ಎಂದು ಸುಪ್ರಸಿದ್ಧವಾದ ಅವನ ಈ 'ಮಾನ'ದ ವಿಷಯದಲ್ಲೂ ಅವನಿಗೆ ಹೆಮ್ಮೆಯೇ. ತನ್ನ ತಂದೆಯೊಡನೆ ಅವನೇ ಹೇಳುತ್ತಾನೆ—'ಯೇನೈವ ಮಾನೇನ ಸಮಂ ಪ್ರಸೂತಃ ತೇನೈವ ಮಾನೇನ ದಿವಂ ಪ್ರಯಾಮಿ' ಎಂದು. ಅಶ್ವತ್ಥಾಮನೊಡನೆಯೂ—'ಮಾನಶರೀರಾ ರಾಜಾನಃ। ಮಾನಾರ್ಥಮೇವ ಮಯಾ ನಿಗ್ರಹೋ ಗೃಹೀತಃ' ಎಂದು ಹೆಮ್ಮೆಯಿಂದಲೇ ಹೇಳುತ್ತಾನೆ.

ದುರ್ಯೋಧನನ ವಾಸ್ತವಿಕ ದೃಷ್ಟಿಯ ವಿಚಾರವಾಗಿ ಹಿಂದೆ ಹೇಳಿದೆ. ಇದೊಂದು ಅವನಲ್ಲಿದ್ದ ಅಸ್ಸಾದೃಶ ಗುಣ. ತನ್ನ ಅಂತಿಮ ಸೋಲಿಗೆ ಕಾರಣ ತನ್ನ 'ಅಪರಿತೋಷ'ವೇ ಎಂದು ಅಶ್ವತ್ಥಾಮನಿಗೆ ತಾನೇ ಮುಚ್ಚುಮರೆಯಿಲ್ಲದೆ ತಿಳಿಸುತ್ತಾನೆ. ಇನ್ನು ಮುಂದೆ ಯುದ್ಧಹೂಡಿ ಪ್ರಯೋಜನವಿಲ್ಲವೆಂಬುದನ್ನು ಬಲರಾಮನಿಗೂ ಅಶ್ವತ್ಥಾಮನಿಗೂ ಸ್ಪಷ್ಟಪಡಿಸುತ್ತಾನೆ. ಏತಕ್ಕಾಗಿ, ಯಾರಿಗಾಗಿ ಇನ್ನು ಯುದ್ಧ? ಭೀಷ್ಮಾದಿ ವೀರರು ಮಡಿದರು. ನೂರು ತಮ್ಮಂದಿರೂ ಸತ್ತುಹೋದರು. ಕರ್ಣ ಹೋಗಿಬಿಟ್ಟ. ನನ್ನ ಸ್ಥಿತಿಯೂ ಇಲ್ಲಿಗೆ ಬಂದಿದೆ. ಇನ್ನು ಯುದ್ಧದಿಂದೇನು ಪ್ರಯೋಜನ? ಪಾಂಡವರು ಬದುಕಿದ್ದರೆ ಕೌರವರಿಗೆ ತರ್ಪಣವನ್ನಾದರೂ ಕೊಟ್ಟಾರು.—ಎಂದು ಬಿಡಿಸಿ ಬಿಡಿಸಿ ಹೇಳುತ್ತಾನೆ. ಬಲದೇವನ ಕಾಲಿಗೆರಗಿ ಸೇಡು ಇನ್ನು ಬೇಡವೆಂದು ಅಂಗಲಾಚುತ್ತಾನೆ. ಅಶ್ವತ್ಥಾಮನೊಡನೆಯೂ ಹೀಗೆಯೇ ವಾದಿಸಿ ಬೇಡಿಕೊಳ್ಳುತ್ತಾನೆ. ಬಲರಾಮನೇನೋ 'ಅಸ್ತು' ಎಂದು ಹೇಳದಿದ್ದರೂ ಮೌನವಾಗಿದ್ದರೆ, ಅಶ್ವತ್ಥಾಮ ದುರ್ಯೋಧನನ ಮಾತಿಗೆ ಕಿವಿಗೊಡದೆ ದುರ್ಜಯನನ್ನು ದುರ್ಯೋಧನನ ನಂತರದ ರಾಜನನ್ನಾಗಿ ಘೋಷಿಸಿ, ವಾತ್ಸಲ್ಯದಿಂದ ತುಂಬಿದ್ದ ದುರ್ಯೋಧನನ

ಅತೃಪ್ತ ಹೃದಯಕ್ಕೆ ಆಶೆ ತೋರಿಸಿ, ಅವನೂ ಮೌನವಾಗಿ ತನ್ನ ಅಭಿಪ್ರಾಯವನ್ನು ಸಮ್ಮತಿಸುವ ಸ್ಥಿತಿಗೆ ತರುತ್ತಾನೆ. ಅಭಿಮಾನಿ ಪಿತೃಹೃದಯವಲ್ಲವೆ? ಹಿಂದೆ ವೈರ ಪಶ್ಚಾತ್ತಾಪವಾಗಿ ಪರಿವರ್ತಿತವಾಗಿತ್ತು. ಈಗ ದುರ್ಜಯನು ರಾಜನೆಂದು ಘೋಷಿಸಲ್ಪಟ್ಟಾಗ, ಪುತ್ರವಾತ್ಸಲ್ಯ ಮುಂದಾಗಿ, ಎಲ್ಲವೂ ಮರೆತು ಹೋಗಿ ದುರ್ಯೋಧನನ ಮನಸ್ಸಿಗೆ ಒಂದು ಅನಿರ್ವಚನೀಯ ತೃಪ್ತಿಯಾದಂತೆ ಸೂಚಿಸುವ 'ಹಂತ! ಕೃತಂ ಮೇ ಹೃದಯಾನುಜ್ಞಾತಂ' ಎಂಬ ಒಂದು ಮಾತು ದುರ್ಯೋಧನನ ಆಂತರಿಕ ಹೆಬ್ಬಯಕೆಯನ್ನು ಪ್ರತಿಬಿಂಬಿಸುತ್ತದೆ.

ಅವನ ಮಾತಾಪಿತೃಭಕ್ತಿ ಅನ್ಯಾದೃಶ. ತಂದೆಯನ್ನು ಕಂಡಾಗ ಅವನ ಕಾಲಿಗೆರಗುವ ಶಕ್ತಿಯನ್ನು ತಾನು ಕಳೆದುಕೊಂಡಿರುವುದರ ಅರಿವಾಗಿ, ಆಗ ಗದಾಘಾತದ ನೋವು ಅವನ ಸ್ಮೃತಿಗೆ ಬರುತ್ತದೆ. ತಾಯಿಯನ್ನು ಕುರಿತು 'ಅಮ್ಮಾ! ನಾನು ಪುಣ್ಯವನ್ನೇನಾದರೂ ಮಾಡಿದ್ದರೆ ಮುಂದಿನ ಜನ್ಮದಲ್ಲೂ ನೀನೇ ನನ್ನ ತಾಯಿಯಾಗಬೇಕು' ಎಂದು ಅವಳ ಕಾಲಿಗೆರಗಿ ಅವನು ಹೇಳುವ ಮಾತು ಭಾರತೀಯ ಮಾತೃಭಕ್ತಿಯ ಪರಮಾದರ್ಶವೆನ್ನಲು ಸಂದೇಹವೇ ಇಲ್ಲ.

ಒಂದೊಂದಾಗಿ ಹೀಗೆ ವಿಮರ್ಶಿಸುತ್ತಾ ಹೋದರೆ ದುರ್ಯೋಧನನಲ್ಲಿದ್ದ ದೋಷವೇನು ಎಂಬುದೇ ಗೋಚರವಾಗದಷ್ಟು ಮಟ್ಟಿಗೆ ಊರುಭಂಗದಲ್ಲಿ ಆತ ಚಿತ್ರಿತನಾಗಿದ್ದಾನೆ. ಆತನಲ್ಲಿದ್ದ 'ಅಪರಿತೋಷ' ದೋಷ ಆತನಿಗೇ ಗೊತ್ತಿತ್ತು. ಅಭಿಮಾನ ಅದನ್ನು ಬಿಡಲು ಅವಕಾಶ ಕೊಡುತ್ತಿರಲಿಲ್ಲ. ಅದರ ಫಲ ಸೋಲು ಮತ್ತು ಸಾವು. ಏಕೈಕ ಸಾರ್ವಭೌಮನಾಗಿ ಅಪ್ರತಿಮನಾಗಿ ಮೆರೆದ ಧೀರೋದಾತ್ತ ನಾಯಕನ ಇಂತಹ ಅಂತ್ಯ ಶೋಚನೀಯ; ಆದರೆ ಅಪರಿಹಾರ್ಯ. ಆದ್ದರಿಂದಲೇ ಭಾಸ ಈ ನಾಟಕವನ್ನು ವಿಷಾದಾಂತವಾಗಿಯೇ ಮುಗಿಸಿ ನಾಟಕ ಲಕ್ಷಣಗಳಿಗೆ ವ್ಯತಿರಿಕ್ತವಾದ ಸಂಪ್ರದಾಯಕ್ಕೆ ನಾಂದಿಯನ್ನು ಆಚರಿಸಿದ್ದಾನೆ.

ಬಲದೇವ

ಕೃಷ್ಣನ ಅಣ್ಣ ಬಲರಾಮನನ್ನು ಊರುಭಂಗ ನಾಟಕದಲ್ಲಿ ಬಲದೇವನೆಂಬ ಹೆಸರಿನಿಂದಲೇ ಭಾಸನು ನಿರ್ದೇಶಿಸುತ್ತಾನೆ. ಬಲದೇವನು ದುರ್ಯೋಧನನಿಗೆ ಗದಾಯುದ್ಧವನ್ನು ಕಲಿಸಿಕೊಟ್ಟ ಗುರು. ನೇಗಿಲನ್ನೇ ಆಯುಧವಾಗಿ ಉಳ್ಳ ತನ್ನ ಗುರುವನ್ನು ದುರ್ಯೋಧನನು 'ಭಗವಾನ್ ಹಲಾಯುಧ' ಎಂದೇ

ಹೆಸರಿಸುತ್ತಾನೆ. ಈ ಬಲದೇವನು ಊರುಭಂಗದಲ್ಲಿ ಮೊದಲಿನಿಂದ ಕೊನೆಯ ವರೆಗೂ ಉಪಸ್ಥಿತನಾಗಿರುವುದು ಅವನ ಶಿಷ್ಯಪ್ರೇಮವನ್ನು ಸೂಚಿಸುತ್ತದೆ. ಮೊದಲಸಲ ಭೀಮನು ದುರ್ಯೋಧನನಿಂದ ಆಹತನಾಗಿ ಕೆಳಗೆ ಬಿದ್ದಾಗ ಅಲ್ಲಿದ್ದವರೆಲ್ಲಾ ಚಕಿತರಾದರೆ ಬಲದೇವನು ಮಾತ್ರ ಹೆಮ್ಮೆಯಿಂದ ಕೂಡಿದ ಸಂತೃಪ್ತಿಯಿಂದ ತನ್ನ ಹಲಾಯುಧವನ್ನು ತಿರುಗಿಸುತ್ತಿರುತ್ತಾನೆ. ಮುಂದೆ ಭೀಮನು ಯುದ್ಧನಿಯಮಗಳನ್ನು ಉಲ್ಲಂಘಿಸಿ ದುರ್ಯೋಧನನ ತೊಡೆಯ ಮೇಲೆ ಗದೆ ಬೀಸಿದಾಗ ಅವನು ತುಂಬ ಕುಪಿತನಾಗುತ್ತಾನೆ. ಇದರಿಂದ ಇನ್ನೇನು ಅನರ್ಥ ಸಂಭವಿಸಿಬಿಡುವುದೋ ಎಂದು ಹೆದರಿ, ವ್ಯಾಸರ ಸಲಹೆ ಯಂತೆ ಭೀಮನನ್ನು ಕೃಷ್ಣನೂ ಪಾಂಡವರೂ ಬೇರೆಡೆಗೆ ಕರೆದೊಯ್ಯುತ್ತಾರೆ. 'ತನ್ನ ಕಣ್ಣೆದುರಿಗೇ ತನ್ನ ಶಿಷ್ಯನು ವಂಚಿತನಾಗಿಬಿಟ್ಟನಲ್ಲ!' ಎಂಬುದೇ ಬಲ ದೇವನ ಅಂತಹ ಕೋಪಕ್ಕೆ ಕಾರಣ. ದುರ್ಯೋಧನನು ಸಾಯುವುದಕ್ಕೆ ಸ್ವಲ್ಪ ಮುಂಚೆ ತನ್ನ ಮಗ ದುರ್ಜಯನಿಗೆ ಹೇಳಿದ ಮಾತುಗಳನ್ನು ಕೇಳಿ ಬಲದೇವ ನಂತಹವನೂ 'ಅಹೋ! ವೈರವು ಪಶ್ಚಾತ್ತಾಪಕ್ಕೆ ತಿರುಗಿಬಿಟ್ಟಿತು' ಎಂದು ಬೆರಗಾಗುತ್ತಾನೆ. ರಾತ್ರಿ ಯುದ್ಧಮಾಡಿ ಪಾಂಡವರನ್ನು ನಿರ್ನಾಮ ಮಾಡುವುದಾಗಿ ಸಾರಿದ ಅಶ್ವತ್ಥಾಮನಿಗೆ ಉತ್ತೇಜನ ದೊರಕುವುದು ಬಲದೇವ ನೊಬ್ಬನಿಂದ ಮಾತ್ರ. ಬಲದೇವನ ಶಿಷ್ಯಪಕ್ಷಪಾತ ಅಷ್ಟು ಗಾಢ.

ಅಶ್ವತ್ಥಾಮ

ಸರ್ವಕ್ಷತ್ರಾಚಾರ್ಯರೆಂದು ವಿಖ್ಯಾತರಾದ ದ್ರೋಣಾಚಾರ್ಯರ ಮಗ ಅಶ್ವತ್ಥಾಮ. ದುರ್ಯೋಧನನು ಇವನನ್ನು ಗುರುಪುತ್ರನೆಂದೇ ಸಂಬೋಧಿಸು ತ್ತಾನೆ. ಊರುಭಂಗ ನಾಟಕದ ಕೊನೆಯ ಘಟ್ಟದಲ್ಲಿ, ಅದೂ ಕ್ಷಣಕಾಲ ಮಾತ್ರ, ಅಶ್ವತ್ಥಾಮನ ಪಾತ್ರ ಬರುವುದಾದರೂ ಅದರ ಪ್ರಭಾವ ವಿಶೇಷ ವಾದುದು. ಭೀಮನ ಅನ್ಯಾಯವಾದ ವ್ಯವಹಾರದಿಂದ ಕ್ರುದ್ಧನಾದ ಅಶ್ವತ್ಥಾಮನು ಬರುವಾಗಲೇ ರಾತ್ರಿಯುದ್ಧ ಹೂಡಿ ಪಾಂಡವರನ್ನು ಧ್ವಂಸ ಮಾಡಿಬಿಡುವುದಾಗಿ ಪ್ರತಿಜ್ಞೆ ಮಾಡುತ್ತಾನೆ. ದುರ್ಯೋಧನನೇ ಎಷ್ಟೋ ಬಗೆ ಯಾಗಿ ಹೇಳಿದರೂ ಅವನ ಕೋಪ ಇಳಿಯುವುದೇ ಇಲ್ಲ. ಬಲರಾಮನು ಮಾತ್ರ ಪರ್ಯಾಯವಾಗಿ ಅವನಿಗೆ ಉತ್ತೇಜನ ನೀಡುತ್ತಾನೆ. ಆಗ ಆತನು ದುರ್ಯೋಧನನ ಮಗ ದುರ್ಜಯನನ್ನು ತನ್ನ ಬಳಿಗೆ ಕರೆದು—"ಅಭಿಷೇಕ

ವಿಲ್ಲದೆಯೇ ಬ್ರಾಹ್ಮಣವಚನದಿಂದ ನೀನು ರಾಜನಾಗು" ಎಂದು ಹೇಳುತ್ತಾನೆ. ಇದರಿಂದ ದುರ್ಯೋಧನನಿಗಾಗುವ ತೃಪ್ತಿ ಅವರ್ಣನೀಯ. ದುರ್ಯೋಧನನ ಮರಣವಾದ ಬಳಿಕ ಧೃತರಾಷ್ಟ್ರ ತಪೋವನಕ್ಕೆ ತೆರಳಿದರೆ ಅಶ್ವತ್ಥಾಮನು ತನ್ನ ಪ್ರತಿಜ್ಞೆಯಂತೆ ಸೌಪ್ತಿಕವಧಕ್ಕಾಗಿ ಬಾಣವನ್ನು ಹಿಡಿದು ಹೊರಡುತ್ತಾನೆ.

•

ಧೃ ತ ರಾ ಷ್ಟ್ರ

ವೃದ್ಧನೂ ಅಂಧನೂ ಆದ ಧೃತರಾಷ್ಟ್ರ ತನ್ನ ಹೆಂಡತಿಯೊಡನೆಯೂ ಇಬ್ಬರು ಸೊಸೆಯರೊಡನೆಯೂ ತೀರ ಚಿಕ್ಕವಯಸ್ಸಿನ ಮೊಮ್ಮಗ ದುರ್ಜಯ ನೊಡನೆಯೂ ಯುದ್ಧಭೂಮಿಗೆ ಬಂದು ಅಲ್ಲಿ ಭೀಮನ ಗದೆಯೇಟಿನಿಂದ ತೊಡೆಮುರಿದು ಉತ್ಕ್ರಮಣೋನ್ಮುಖನಾಗಿ ಬಿದ್ದಿದ್ದ ಮಗ ದುರ್ಯೋಧನನನ್ನು ಹುಡುಕುವ ದೃಶ್ಯ ಎಂತಹವರ ಮನಸ್ಸನ್ನೇ ಆದರೂ ಕರಗಿಸಿಬಿಡುವಂತಹುದು. ಆಗ ಅವನಾಡುವ 'ಓ ವಿಧಿಯೇ! ನೂರು ಪುತ್ರರನ್ನು ಹೆತ್ತೂ ಒಂದುಸಲ ವಾದರೂ ಪುತ್ರದತ್ತವಾದ ತಿಲೋದಕವನ್ನು ಅನುಭವಿಸುವ ಯೋಗವೂ ಈ ಧೃತರಾಷ್ಟ್ರನಿಗಿಲ್ಲದೆ ಹೋಯಿತೆ?' ಎಂಬ ಮಾತು ಅವನ ಹೃದಯಾಂತರಾಳದ ದುಃಖದ ದಿಕ್ಸೂಚಿ. ಅಶ್ವತ್ಥಾಮನ ವಿವೇಕಹೀನ ಪ್ರತಿಜ್ಞೆಗೆ ಬಲರಾಮನು ಸಾಕ್ಷಿಯಾಗಿದ್ದುದು ಧೃತರಾಷ್ಟ್ರನ ಮನಸ್ಸನ್ನು ಕದಡಿಬಿಡುತ್ತದೆ. ದುರ್ಯೋಧನನ ಮರಣದಿಂದ ರಾಜ್ಯಾದಿಗಳ ಬಗೆಗೆ ಧೃತರಾಷ್ಟ್ರನು ಜುಗುಪ್ಸೆಗೊಂಡು ತಪೋವನಕ್ಕೆ ತೆರಳಿದುದು ಮುಂದಿನ ಸೌಪ್ತಿಕವಧದ ಸೊಂಕು ತನಗಿಲ್ಲದಿರಲೆಂದೇ ಇರಬೇಕು.

Sanskrit works with English Translation, &c.

DRAMA	Rs.	P.
BHĀSA's Pañcarātram *(Revised Fourth Edition)*	4	50
,, Abhiṣekanāṭakam *(,, 4th Edition–1966)*	4	50
,, Svapna-vāsavadattam *(,, 2nd Edition–1966)*	6	00
,, Ūrubhaṅgam of Bhāsa *(,, ,, 1967)*	3	75
,, Pratimā-nāṭakam	5	00
,, Karṇabhāram *(Revised Edition)*	1	25
KĀLIDĀSA's Mālavikāgnimitram *(Revised Edition)*	4	25
,, Abhijñāna-s'ākuntalam *(do 1967)*	6	25
,, Vikramorvas'iyam *(do 1966)*	4	50
S'RĪ HARṢA's Ratnāvali	3	25
VIS'ĀKHADATTA's Mudrārākṣasam	4	25
CHAMPU		
CAMPŪ-RĀMĀYAṆAM—Ayodhyā-kāṇḍa	2	50
do Araṇya-kāṇḍa	2	75
do Kiṣkindhā-kāṇḍa *(1966)*	2	75
NĪLAKAṆṬHA-VIJAYAM Chapter III	2	25
PROSE		
BĀṆA's Kādambarī: Pūrvabhāga (Parts I & III)	no stock	
do (Part II)	3	00
do (Part IV)	2	50
do (Parts V & VI) each	2	75
do Mahās'vetā-vṛttanta Eng. Trans. only	2	50
POETRY		
KĀLIDĀSA's Kumārasambhavam Canto III	2	25
do Canto V *(1967)*	3	00
do Canto VI	2	50
KĀLIDĀSA's Raghuvams'am— Canto IV	1	12
do Canto VI *(1967)*	3	00
do Canto XIII	2	50
do Canto XIV (old)	0	80
AS'VAGHOṢA's Buddhacaritam— Canto I	2	50
do Canto III	2	50
BHARTṚHARI's Nītis'atakam *(Revised Edition 1966)*	2	50
GENERAL		
Outlines of the History of Classical Sanskrit Literature *(Revised Edition)*	5	00